ಸಂಪುಟ : 8 ಸಂಚಿಕೆ : 247 ಪುಟ : 4 ಬೆಲೆ : 3.00 ಬುಧವಾರ ನವ್ಹಂಬರ್ 08, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 247 Pages : 4 Price : 3.00 Wednesday November 08, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ಕಂದಾಯ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಸಚಿವ ಕೃಷ್ಣ ಭೈರೇಗೌಡ

## ಇಲಾಖೆಯ ಕೆಲಸಗಳಲ್ಲಿ ನಿಧಾನಗತಿ ತಪ್ಪಿಸಲು ಇ-ಆಫೀಸ್ ವ್ಯವಸ್ಥೆ



> ಬಗರ್‌ಹುಕುಂ ಅಡಿ ದುರ್ಬಳಕೆ ತಡೆಗಟ್ಟಲು ಮಂಜೂರಾತಿಗೆ ಡಿಜಿಟಲ್ ಸಹಿಗೆ ಅವಕಾಶ ಮಾಡಿಕೊಟ್ಟು ಡಿಜಿಟಲ್ ಸಾಗುವಳಿ ಚೀಟಿಯನ್ನು ನೀಡಲಾಗುತ್ತದೆ. ಈ ಹಿಂದೆ ನೀಡಿದ ಸಾಗುವಳಿ ಚೀಟಿ ನೀಡಿದ ನೈಜತೆಯ ಬಗ್ಗೆ ರಾಜ್ಯದಲ್ಲಿ ಲಕ್ಷಾಂತರ ಪ್ರಕರಣಗಳು ನ್ಯಾಯಾಲಯದಲ್ಲಿವೆ. ಮುಂದಿನ ದಿನಗಳಲ್ಲಿ ಹೀಗಾಗದಂತೆ ಡಿಜಿಟಲೀಕರಣ ಮಾಡಲಾಗುತ್ತಿದೆ.
>
> **– ಕೃಷ್ಣ ಭೈರೇಗೌಡ, ಕಂದಾಯ ಸಚಿವರು.**



**■ವಿಜಯಸಾಕ್ಷಿ ಸುದ್ದಿ, ಗದಗ**

ರೈತರು ತಮ್ಮ ಜಮೀನುಗಳ ಮಾಹಿತಿಯನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳುವ ಮೂಲಕ ಬರ ಪರಿಹಾರ ಹಾಗೂ ವಿಮಾ ಪರಿಹಾರಗಳಂತಹ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ಇಲಾಖೆ ಅಧಿಕಾರಿಗಳು ರೈತರಲ್ಲಿ ಜಾಗೃತಿ ಮೂಡಿಸುವ ಮೂಲಕ ರೈತರ ಪ್ರತಿಯೊಂದು ಜಮೀನನ್ನು ಫ್ರೂಟ್ ತಂತ್ರಾಂಶದ ವ್ಯಾಪ್ತಿಗೆ ತರಬೇಕು ಎಂದು ಕಂದಾಯ ಸಚಿವರಾದ ಕೃಷ್ಣಭೈರೇಗೌಡ ಸೂಚಿಸಿದರು.

ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಮಂಗಳವಾರ ಜರುಗಿದ ಕಂದಾಯ ಇಲಾಖೆಯ ಜಿಲ್ಲಾ ಮಟ್ಟದ ಪ್ರಗತಿಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸರ್ಕಾರದ ಪರಿಹಾರ ಮೊತ್ತಗಳನ್ನು ನೇರವಾಗಿ ರೈತರ ಖಾತೆ ಜಮೆ ಮಾಡಲು ಫ್ರೂಟ್ಸ್ ತಂತ್ರಾಂಶ ಬಳಸಲಾಗುತ್ತಿದೆ. ರೈತರೆಲ್ಲರೂ ತಮ್ಮ ಜಮೀನಿನ ನಿಖರವಾದ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಿಕೊಳ್ಳುವ ಮೂಲಕ ಪರಿಹಾರ ಪಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ರೈತರಿಗೆ ಮಾಹಿತಿ ಒದಗಿಸಬೇಕು. ಜಿಲ್ಲೆಯಲ್ಲಿ ಫ್ರೂಟ್ಸ್ ತಂತ್ರಾಂಶದಲ್ಲಿ ಈಗಾಗಲೇ ನೋಂದಣಿ ಮಾಡಲಾಗಿದ್ದು, ಬಾಕಿ ಉಳಿದ ಶೇ 20ರಿಂದ 25ರಷ್ಟು ರೈತರು ನೋಂದಣಿ ಕಾರ್ಯವನ್ನು ನವೆಂಬರ್ ಅಂತ್ಯದೊಳಗಾಗಿ ಪೂರ್ಣಗೊಳಿಸಬೇಕು ಎಂದರು.

ಜಿಲ್ಲೆಯಲ್ಲಿ ಬರ ಆವರಿಸಿದ ಹಿನ್ನೆಲೆಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವಿನ ಕೊರತೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಅಧಿಕಾರಿಗಳು ಕೈಗೊಳ್ಳಬೇಕು. ಮೇವಿನ ಕೊರತೆ ಇದ್ದಲ್ಲಿ ಅಗತ್ಯಕ್ಕನುಸಾರ ಮೇವನ್ನು ಖರೀದಿ ಮಾಡಿಕೊಳ್ಳುವಂತೆ ಸೂಚಿಸಿದರು. ನೀರಿನ ವ್ಯವಸ್ಥೆ ಇರುವೆಡೆ ರೈತರಿಗೆ ಮೇವಿನ ಬೀಜದ ಕಿಟ್‌ಗಳನ್ನು ನೀಡಲಾಗುವುದು. ಅವರು ಮೇವನ್ನು ಬೆಳೆದು ತಮ್ಮ ಜಾನುವಾರುಗಳಿಗೆ ಬಳಸಿಕೊಳ್ಳಬಹುದಾಗಿದೆ. ಅಧಿಕವಾದಲ್ಲಿ ಸರ್ಕಾರಕ್ಕೆ ನಿಗದಿಪಡಿಸಿದ ದರದಲ್ಲಿ ಮಾರಾಟ ಮಾಡಬಹುದಾಗಿದೆ. ಈ ಕುರಿತು ರೈತರಲ್ಲಿ ಜಾಗೃತಿ ಮೂಡಿಸಿ ಜಿಲ್ಲೆಯಲ್ಲಿ ಮೇವಿನ ಕೊರತೆ ಆಗದಂತೆ ನಿಗಾವಹಿಸಲು ತಿಳಿಸಿದರು.

ಜಿಲ್ಲಾಧಿಕಾರಿಗಳ ಖಾತೆಯಲ್ಲಿ 16.5 ಕೋಟಿ ರೂ. ಅನುದಾನವಿದ್ದು, ಇದನ್ನು ಅಗತ್ಯಕ್ಕನುಸಾರ ಕುಡಿಯುವ ನೀರು, ಜಾನುವಾರುಗಳ ಮೇವು ಖರೀದಿಗೆ ಬಳಕೆ ಮಾಡಿಕೊಳ್ಳಬಹುದಾಗಿದೆ. ಅಗತ್ಯ ಬಿದ್ದಲ್ಲಿ ಗೋಶಾಲೆ, ಮೇವು ಬ್ಯಾಂಕ್ ತೆರೆಯುವಂತೆ ತಿಳಿಸಿದರು.

**ಸರ್ಕಾರಿ ಭೂಮಿ ರಕ್ಷಣೆಗೆ ಬೀಟ್ ಪದ್ಧತಿ:** ಸರ್ಕಾರಿ ಜಮೀನುಗಳ ರಕ್ಷಣೆಗಾಗಿ ಆ್ಯಪ್ ಸಿದ್ಧಪಡಿಸಲಾಗುತ್ತಿದ್ದು, ಶೀಘ್ರದಲ್ಲೇ ಅಸ್ತಿತ್ವಕ್ಕೆ ಬರಲಿದೆ. ಸರ್ಕಾರಿ ಜಮೀನುಗಳನ್ನು ಆ್ಯಪ್ ಮೂಲಕ ಡಾಟಾಬೇಸ್‌ನ್ನು ಸಿದ್ಧಪಡಿಸಿ ಪ್ರತಿ ಮೂರು ತಿಂಗಳಿಗೊಮ್ಮೆ ಸರ್ಕಾರಿ ಜಾಗೆಗಳ ಸ್ಥಳಕ್ಕೆ ಗ್ರಾಮ ಲೆಕ್ಕಿಗರು ಭೇಟಿ ನೀಡಿ ಭೂಮಿ ಒತ್ತುವರಿ ಆಗಿದೆಯೋ, ಇಲ್ಲವೋ ಎಂಬುದನ್ನು ಪರಿಶೀಲನೆ ನಡೆಸಿ ಆ್ಯಪ್ ಮೂಲಕ ಆ ಸ್ಥಳದಿಂದಲೇ ಧೃಡೀಕರಿಸಿ ವರದಿಯನ್ನು ಅಪ್‌ಲೋಡ್ ಮಾಡಬೇಕು. ಒಂದು ವೇಳೆ ಸರಕಾರಿ ಜಮೀನು ಒತ್ತುವರಿ ಆಗಿದ್ದಲ್ಲಿ ಆ್ಯಪ್ ಬಳಸಿ ಆನ್‌ಲೈನ್ ಮೂಲಕವೇ ತಹಸೀಲ್ದಾರರಿಗೆ ವರದಿ ನೀಡಬೇಕು. ಈ ಪ್ರಕ್ರಿಯೆಯಿಂದ ಸರಕಾರಿ ಭೂ-ಕಬಳಿಕೆ ನಿಯಂತ್ರಣಗೊಳ್ಳಲಿದೆ ಎಂದರು.

**ಕೋರ್ಟ್ ಕೇಸ್:** ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಜಮೀನುಗಳ ವಿಷಯವಾಗಿ ಅನೇಕ ಪ್ರಕರಣಗಳು ಕೋರ್ಟ್ ಮೆಟ್ಟಿಲೇರಿದ್ದರೂ ಸಹ ಯಾವುದೇ ವಕಾಲತ್ತು ಹಾಕದೇ ಇದ್ದ ರಾಜ್ಯದ ಸುಮಾರು 10,500 ಪ್ರಕರಣಗಳಿದ್ದವು. ಈ ಕುರಿತ ಪರಿಶೀಲನೆ ನಡೆಸಿ ವಕಾಲತ್ತು ಹಾಕಿಸಿದ್ದರಿಂದ ಸುಮಾರು 2500 ಕೇಸುಗಳು ಮಾತ್ರ ಉಳಿದುಕೊಂಡಿವೆ ಎಂದರು.

**ಇ-ಆಫೀಸ್:** ಕಂದಾಯ ಇಲಾಖೆ ಕೆಲಸ-ಕಾರ್ಯಗಳನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ನಿಧಾನಗತಿ ತಪ್ಪಿಸಲು ಇ-ಆಫೀಸ್ ವ್ಯವಸ್ಥೆ ಅಳವಡಿಸಲಾಗಿದೆ. ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಸಂಪೂರ್ಣವಾಗಿ ಬಳಸಿಕೊಳ್ಳುವ ಮೂಲಕ ಇ-ಆಫೀಸ್ ಮೂಲಕವೇ ಕಡತಗಳ ಚಲನೆಯಾಗಬೇಕು. ಇದರಿಂದ ವಿಳಂಬಕ್ಕೆ ವಿದಾಯ ದೊರೆಯುತ್ತದೆ. ತನ್ಮೂಲಕ ನಮ್ಮ ಸರ್ಕಾರದ ಜನಪರ ಹಾಗೂ ಪಾರದರ್ಶಕ ಆಡಳಿತದ ಉದ್ದೇಶ ಸಾಕಾರಗೊಳ್ಳಲಿದೆ ಎಂದರು.

**ದಾಖಲೆಗಳ ಡಿಜಿಟಲೀಕರಣ** ರೆಕಾರ್ಡ್ ರೂಂನಲ್ಲಿರುವ ದಾಖಲೆಗಳನ್ನು ಸ್ಕ್ಯಾನ್ ಮಾಡುವ ಮೂಲಕ ಶಾಶ್ವತವಾಗಿ ಉಳಿಸಲು ಡಿಜಿಟಲೀಕರಣ ವ್ಯವಸ್ಥೆ ಜಾರಿಗೊಳಿಸಲಾಗುತ್ತಿದೆ. ರಾಜ್ಯ ಮಟ್ಟದಲ್ಲಿ ದಾಖಲೆಗಳ ಸೂಕ್ತ ರಕ್ಷಣೆಗೆ ಉತ್ತಮ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ರಕ್ಷಣೆ ಮಾಡುತ್ತೇವೆ. ಜನಸಾಮಾನ್ಯರಿಗೆ ಸುಲಭವಾಗಿ ಅವರಿಗೆ ಸಂಬಂಧಿಸಿದ ದಾಖಲೆಗಳು ಸಿಗುವಂತೆ ಮಾಡಲು ಕ್ರಮ ವಹಿಸಲಾಗುತ್ತಿದೆ ಎಂದರು.

ಶಾಸಕರಾದ ಜಿ.ಎಸ್. ಪಾಟೀಲ ಮಾತನಾಡಿ, ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಿಂದ ಕೊನೆಯಲ್ಲಿರುವ ಗ್ರಾಮಗಳಿಗೆ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ. ಗಜೇಂದ್ರಗಡ ತಾಲೂಕಿನ ಕೆಲವು ಗ್ರಾಮಗಳು ರೋಣ ತಾಲೂಕಿಗೆ ಸೇರ್ಪಡೆ ಹಾಗೂ ದಾಖಲೆಗಳ ಮಾರ್ಪಾಡಾಗದೇ ಇರುವುದರಿಂದ ಕೆಲವು ಗ್ರಾಮಗಳ ರೈತರಿಗೆ ಬೆಳೆ ವಿಮೆ ಹಾಗೂ ಪರಿಹಾರ ಪಡೆಯಲು ತೊಂದ-ರೆಯಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಕೃಷ್ಣಭೈರೇಗೌಡ ಆದಷ್ಟು ಬೇಗನೆ ಈ ಸಮಸ್ಯೆಗೆ ಪರಿಹಾರ ನೀಡಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ವಿ.ಪ ಸದಸ್ಯ ಎಸ್.ವಿ ಸಂಕನೂರ ಮಾತನಾಡಿ, ಲಕ್ಷ್ಮೇಶ್ವರ ಹಾಗೂ ಗದಗ ನಗರದಲ್ಲಿ ಸಮರ್ಪಕ ನೀರು ಪೂರೈಕೆ ಆಗುತ್ತಿಲ್ಲ. ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವದಾಗಿ ಸಭೆ ಗಮನಕ್ಕೆ ತಂದರು. ಇದಕ್ಕೆ ಪ್ರತಿಯಾಗಿ ಅಧಿಕಾರಿಗಳಿಂದ ಮಾಹಿತಿ ಪಡೆದು ಮಾತನಾಡಿದ ಸಚಿವರು, ನೀರು ಪೂರೈಕೆಯಲ್ಲಿ ಆಗುತ್ತಿರುವ ಸೋರಿಕೆ ತಡೆದು ನಿಯಮಿತವಾಗಿ ಜನಸಾಮಾನ್ಯರಿಗೆ ನೀರು ಪೂರೈಕೆ ಮಾಡಲು ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಮಾತನಾಡಿ, ಜಿಲ್ಲೆಯಲ್ಲಿ ಸಧ್ಯ 11 ಹೋಬಳಿಗಳಿದ್ದು ಜನಸಂಖ್ಯೆ ಅನುಸಾರ 3 ಹೊಸ ಹೊಬಳಿ ಆಗಬೇಕಿದೆ. ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಜೊತೆಗೆ ತಹಸೀಲ್ದಾರರಿಗೆ ಅಗತ್ಯವಿರುವ ಮೂರು ವಾಹನಗಳನ್ನು ಪೂರೈಸುವಂತೆ, ಹೊಸ ತಾಲೂಕು ಹಾಗೂ ಶಿಥಿಲಾವಸ್ಥೆಯಲ್ಲಿರುವ ತಾಲೂಕು ಕಚೇರಿಗಳ ದುರಸ್ತಿಗೆ ಅನುದಾನ ಒದಗಿಸುವಂತೆ ಕೋರಿದರು. ಸಭೆಯಲ್ಲಿ ಗದಗ-ಬೆಟಗೇರಿ ನಗರಸಭಾಧ್ಯಕ್ಷೆ ಉಷಾ ದಾಸರ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಕಂದಾಯ ಇಲಾಖೆ ಆಯುಕ್ತರಾದ ಪಿ.ಸುನೀಲಕುಮಾರ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಉಪವಿಭಾಗಾಧಿಕಾರಿ ಡಾ.ವೆಂಕಟೇಶ ನಾಯ್ಕ ಸೇರಿದಂತೆ ತಹಸೀಲ್ದಾರರು, ಕಂದಾಯ ನಿರೀಕ್ಷಕರು, ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.

## ಗದಗ-ಬೆಟಗೇರಿ: ಇಂದಿನ ನೀರು ಪೂರೈಕೆ ವಿವರ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಅವಳಿ ನಗರದಲ್ಲಿ ನವೆಂಬರ್ 8ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 16ರಲ್ಲಿ ಹೊಂಬಳ ರಸ್ತೆ, ಜನತಾ ಕಾಲೋನಿಯ ಕೆಲವು ಭಾಗಗಳು, ವಾರ್ಡ್ ನಂ. 26ರಲ್ಲಿ ಕಲಾಮಂದಿರ ರಸ್ತೆ, ಅಕ್ಕನ ಬಳಗ, ಜೆ.ಟಿ.ಮಠ ರಸ್ತೆ, ಅಂಗಡಿಯವರ ಲೈನ್, ಬಂಗಾರಶೆಟ್ಟರ್ ಲೈನ್, ಮಾಳೆಕೊಪ್ಪಮಠ ಸಂಧಿ, ಕೃಷ್ಣಾ ಟಾಕೀಸ್, ವಾರ್ಡ್ ನಂ. 29ರಲ್ಲಿ ನೆಲ್ಸನ್ ಮೆಂಡಲ್ ಸ್ಕೂಲ್, ಪಾಪಡೆಯವರ ಲೈನ್, ಸಾಯಿಬಾಬಾ ಗುಡಿ ಲೈನ್, ಪಂಚಾಕ್ಷರಿ ನಗರ, ಗಿರಣಿ ಲೈನ್, ನಿಂಗಪ್ಪರ ಲೈನ್, ಸಫಾರಿಯವರ ಲೈನ್, ಅಕ್ಕಿಯವರ ಲೈನ್, ಗಾರ್ಡನ್ ಲೈನ್, ಸ್ವಾಮಿಯವರ ಲೈನ್, ಶುದ್ಧ ನೀರಿನ ಘಟಕದ ಲೈನ್, ವಾಹಿದ್ ಅವರ ಲೈನ್,

ಡಬ್ಲ್ಯೂ.ಟಿ.ಪಿ. ಹಾಗೂ ನಗರದ ಮುಖ್ಯರಸ್ತೆಗಳಲ್ಲಿ ಮುಖ್ಯ ನೀರಿನ ಪೈಪ್ ಲೈನ್‌ಗಳ ದುರಸ್ತಿ ಕಾಮಗಾರಿ ಕೈಗೊಳ್ಳುತ್ತಿದ್ದರ ಕಾರಣ ಅವಳಿ ನಗರದ ನೀರು ಸರಬರಾಜುವಿನಲ್ಲಿ ಇಂದು 1 ದಿನಕ್ಕೆ ವ್ಯತ್ಯಯ ಉಂಟಾಗಲಿದೆ.

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನ.11ರಂದು ಒನಕೆ ಓಬವ್ವ ಜಯಂತಿ ಆಚರಣೆ

**■ವಿಜಯಸಾಕ್ಷಿ ಸುದ್ದಿ, ಗದಗ**

ವೀರವನಿತೆ ಒನಕೆ ಓಬವ್ವ ಜಯಂತಿಯನ್ನು ನವೆಂಬರ್ 11 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಅರ್ಥಪೂರ್ಣವಾಗಿ ಹಾಗೂ ವ್ಯವಸ್ಥಿತವಾಗಿ ಏರ್ಪಡಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ. ತಿಳಿಸಿದರು.

ಗದಗ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಮಂಗಳವಾರದಂದು ವೀರವನಿತೆ ಒನಕೆ ಓಬವ್ವ ಜಯಂತಿ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಜಯಂತಿ ಕಾರ್ಯಕ್ರಮದಲ್ಲಿ ವೀರವನಿತೆ ಒನಕೆ ಓಬವ್ವ ಇವರ ಸಾಹಸಗಾಥೆಯ ಕುರಿತು ಸಾರ್ವಜನಿಕರಿಗೆ ತಿಳುವಳಿಕೆ ನೀಡಲು ಉಪನ್ಯಾಸಕರನ್ನು ನೇಮಕ ಮಾಡಲಾಗುವುದು. ಸಂಗೀತ ಕಾರ್ಯಕ್ರಮದೊಂದಿಗೆ ಶಿಷ್ಟಾಚಾರ ಅನ್ವಯ ಆಮಂತ್ರಣ ಪತ್ರಿಕೆ ಮುದ್ರಣಕ್ಕೆ ಕ್ರಮ ವಹಿಸಲಾಗುವುದು. ಒಟ್ಟಾರೆಯಾಗಿ ಓಬವ್ವ ಜಯಂತಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ ತಿಳಿಸಿದರು.

ಕಾರ್ಯಕ್ರಮದಲ್ಲಿ ವೇದಿಕೆ ವ್ಯವಸ್ಥೆ , ಬ್ಯಾನರ್ ಅಳವಡಿಕೆ, ಉಪಹಾರದ ವ್ಯವಸ್ಥೆ ಕುರಿತು ಚರ್ಚಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯ ಸ್ವಾಮಿ ಬಿ. ಸ್ವಾಗತಿಸಿ, ವಂದಿಸಿದರು.

ಸಭೆಯಲ್ಲಿ ಎಸ್.ಎನ್.ಬಳ್ಳಾರಿ, ಪ್ರೊ.ಕೆ.ಎಚ್.ಬೇಲೂರು, ಆನಂದ ಶಿಂಗಾಡಿ, ಶರೀಫ್ ಬಿಳಿಎಲಿ, ಎಸ್.ಎನ್.ಲಿಂಗಧಾಳ, ಸಿ.ಬಿ.ಕಾಳೆ, ಮಹಾಂತೇಶ ಮದ್ದೂರ, ರಮೇಶ ಕೊಳೂರು, ಬಸವರಾಜ ಬಿಳೆಎಲಿ, ಪ್ರಕಾಶ ವಿ.ಬಿ., ವಾಸಂತಿ ಮಲ್ಲಾಪೂರ ಸೇರಿದಂತೆ ವಿವಿಧ ಸಮುದಾಯದ ಮುಖಂಡರು, ಗಣ್ಯರು ಪಾಲ್ಗೊಂಡಿದ್ದರು.

## ಅರ್ಜಿ ಆಹ್ವಾನ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ನಗರಸಭೆಯ ವ್ಯಾಪ್ತಿಯಲ್ಲಿ ದೀನದಯಾಳ ಅಂತ್ಯೋದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ ಸ್ವಯಂ ಉದ್ಯೋಗ ಕಾರ್ಯಕ್ರಮದಡಿ ವೈಯಕ್ತಿಕ ಚಟುವಟಿಕೆಗಳಿಗೆ, ಗುಂಪು ಉದ್ಯೋಗ ಮತ್ತು ಸ್ವ ಸಹಾಯ ಗುಂಪುಗಳಿಗೆ ಸಂಪರ್ಕ ಸಾಲ ಯೋಜನೆಗಳಿಗೆ ಆಹ್ವಾನಿಸಲಾಗಿದೆ.

ಅರ್ಜಿಯೊಂದಿಗೆ ಜಾತಿ ಮತ್ತು ಆದಾಯ, ವಿದ್ಯಾರ್ಹತೆ, ಪಡಿತರ ಚೀಟಿ/ ಮತದಾರರ ಗುರುತಿನ ಚೀಟಿ/ ರಹವಾಸಿ ಪತ್ರ/ ಆಧಾರ್ ಚೀಟಿಯೊಂದಿಗೆ ಇನ್ನಿತರ ದಾಖಲೆ ಲಗತ್ತಿಸಬೇಕು. ನಿಗದಿತ ಅರ್ಜಿಯನ್ನು ದ್ವಿ- ಪ್ರತಿಯಲ್ಲಿ ಪೌರಾಯುಕ್ತರು ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ ಈ ವಿಳಾಸಕ್ಕೆ ನವೆಂಬರ್ 20 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಡೇ-ನಲ್ಮ ವಿಭಾಗ ಗದಗ ಬೆಟಗೇರಿ ನಗರಸಭೆ ಕಾರ್ಯಾಲಯ ಸಂಪರ್ಕಿಸಬಹುದಾಗಿದೆ.

## ಅರ್ಜಿ ಆಹ್ವಾನ

**■ವಿಜಯಸಾಕ್ಷಿ ಸುದ್ದಿ, ಮುಳಗುಂದ**

2023/24ನೇ ಸಾಲಿನ ತುಂತುರು ನೀರಾವರಿ ಘಟಕದಡಿ ಸ್ಪಿಂಕ್ಲರ್ ಪಡೆಯಲಿಚ್ಛಿಸುವ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ರೈತ ಬಾಂಧವರು ಹುಲಕೋಟಿ ರೈತ ಸಂಪರ್ಕ ಕಾರ್ಯಾಲಯದಲ್ಲಿ ಆಧಾರ್ ಕಾರ್ಡ್ ಪ್ರತಿ, ಪಹಣಿ(ಇತ್ತೀಚಿನ) ಕಂಪ್ಯೂಟರ್ ಉತಾರ, ನೀರಾವರಿ ಪ್ರಮಾಣಪತ್ರ, ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, 20 ರೂ ಬಾಂಡ್ ಪ್ರತಿ, ಬ್ಯಾಂಕ್ ಪಾಸ್‌ಬುಕ್, ಜಾತಿ ಪ್ರಮಾಣಪತ್ರ (ಪ.ಜಾತಿ, ಪ.ಪಂಗಡ ವರ್ಗದವರಿಗೆ ಮಾತ್ರ) ಝುರಾಕ್ಸ ಪ್ರತಿಗಳೊಂದಿಗೆ ಒಂದು ಹೆಕ್ಟೇರ್‌ಗೆ 63 ಎಂ.ಎಂ(2 ಇಂಚು, ರೈತ ವಂತಿಗೆ 4139 ರೂ, 75 ಎಂ.ಎಂ.(2.1/2 ಇಂಚು) ರೈತ ವಂತಿಗೆ 4667 ರೂ ಸಲ್ಲಿಸಬೇಕು ಎಂದು ಹುಲಕೋಟಿ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ರಾಜೇಶ್ವರಿ ಚಿನಿವಾಲರ ಪ್ರಕಟಣೆಗೆ ತಿಳಿಸಿದ್ದಾರೆ.

## ಸಚಿವ ಕೃಷ್ಣ ಭೈರೇಗೌಡರಿಗೆ ಕಾಂಗ್ರೆಸ್ ಮುಖಂಡರಿಂದ ಸ್ವಾಗತ



**■ವಿಜಯಸಾಕ್ಷಿ ಸುದ್ದಿ, ಗದಗ**

ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಗೆ ಜಿಲ್ಲೆಗೆ ಆಗಮಿಸಿದ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರನ್ನು ಗದಗ-ಬೆಟಗೇರಿ ಶಹರ ಕಾಂಗ್ರೆಸ್ ಸಮಿತಿ ಹಾಗೂ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಆತ್ಮೀಯವಾಗಿ ಸ್ವಾಗತಿಸಿದರು.

ಗದಗ-ಬೆಟಗೇರಿ ಶಹರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಬಿ. ಅಸೂಟಿ, ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ, ನಗರಸಭೆ ವಿರೋಧ ಪಕ್ಷದ ಉಪನಾಯಕ ಬರಕತ್‌ಅಲಿ ಮುಲ್ಲಾ, ಮುಖಂಡ ಆಂಜನೇಯ ಕಟಗಿ ಮುಂತಾದವರಿದ್ದರು.

## 2ಎ ಮೀಸಲಾತಿ ಬೇಡಿಕೆ ಈಡೇರುವವರೆಗೆ ಹೋರಾಟ ನಿಲ್ಲದು

**■ವಿಜಯಸಾಕ್ಷಿ ಸುದ್ದಿ, ದಾವಣಗೆರೆ**

ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡಲು ಕೇಂದ್ರ ಸರ್ಕಾರಕ್ಕೆ ಕೂಡಲೇ ಶಿಫಾರಸು ಮಾಡಬೇಕು ಹಾಗೂ 2ಎ ಮೀಸಲಾತಿಯನ್ನು ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ನೀಡಬೇಕೆಂಬ ಬೇಡಿಕೆ ಇಟ್ಟುಕೊಂಡು ಮತ್ತೆ ಹೋರಾಟ ಆರಂಭಿಸಲಾಗಿದೆ.



ಈ ಬಗ್ಗೆ ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಕೂಡಲ ಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ನವೆಂಬರ್ 10ಕ್ಕೆ ದಾವಣಗೆರೆಯ ಹೊರವಲಯದ ಚಿಂದೋಡಿ ಲೀಲಾ ಸಮುದಾಯದ ಬಳಿಯ ರಾಷ್ಟ್ರೀಯ ಹೆದ್ದಾರಿ-4ರಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ನೆರವೇರಿಸಿ ಸರ್ಕಾರದ ಮೇಲೆ ಒತ್ತಡ ಹಾಕುವುದಾಗಿ ತಿಳಿಸಿದರು.

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಅನುಷ್ಠಾನಗೊಳಿಸಲೇಬೇಕು. ಲಿಂಗಾಯತ ಉಪಸಮಾಜಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡಲು ನಿರ್ಧರಿಸಬೇಕು. ಈ ಎರಡೂ ಬೇಡಿಕೆ ಈಡೇರುವವರೆಗೆ ಹೋರಾಟ ನಿಲ್ಲದು ಎಂದು ಎಚ್ಚರಿಕೆ ನೀಡಿದರು.

ಈ ಹೋರಾಟದಲ್ಲಿ ಬಿಜೆಪಿ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ್, ಅರವಿಂದ ಬೆಲ್ಲದ್, ವಿನಯ ಕುಲಕರ್ಣಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಅನುಷ್ಠಾನ ಹಾಗೂ ಲಿಂಗಾಯತ ಉಪಸಮಾಜಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡಲು ಕೇಂದ್ರಕ್ಕೆ ಶಿಫಾರಸ್ಸು ಮಾಡುವ ವಿಚಾರದಲ್ಲಿ ರಾಜ್ಯ ಸರ್ಕಾರ ನ. 10ರೊಳಗೆ ತೀರ್ಮಾನ ಪ್ರಕಟಿಸಿ ಸಮಾಜದ ಜನರಲ್ಲಿ ವಿಶ್ವಾಸ ಮೂಡಿಸುವ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

## ಸಾಕ್ಷಿ ಸುಭಾಷಿತ

ಇತರರ ದೋಷಗಳನ್ನು ತೋರುವಲ್ಲಿ ಎಲ್ಲರೂ ಸದಾ ನಿಪುಣರಾಗಿಯೇ ಇರುತ್ತಾರೆ.

–ಸುಭಾಷಿತ

## ಸಂಪಾದಕೀಯ

# ಸರ್ಕಾರಕ್ಕೆ ಮತ್ತೊಮ್ಮೆ ಹೈ ಚಾಟಿ

ಶಿಕ್ಷಣ ಮತ್ತು ಆರೋಗ್ಯ ಆಧುನಿಕ ಜಗತ್ತಿನ ಮೂಲಭೂತ ಅವಶ್ಯಕತೆಗಳು. ಆದರೆ ಸದ್ಯ ವೈದ್ಯಕೀಯ ಕ್ಷೇತ್ರ ಸಿಬ್ಬಂದಿಗಳ ಕೊರತೆಯನ್ನು ಎದುರಿಸುತ್ತಿದೆ. ಸಿಬ್ಬಂದಿಗಳ ಕೊರತೆಯಿಂದ ಬಡ ರೋಗಿಗಳ ಪಾಲಿಗೆ ಗುಣಮಟ್ಟದ ವೈದ್ಯಕೀಯ ಸೌಲಭ್ಯ ದುಸ್ತರವಾಗಿದೆ.

ರಾಜ್ಯದಲ್ಲಿ ಸರಿಸುಮಾರು 16500 ವೈದ್ಯಕೀಯ ಸಿಬ್ಬಂದಿ ಹುದ್ದೆಗಳು ಖಾಲಿ ಇರುವುದು ಆತಂಕಕ್ಕೆ ಕಾರಣವಾಗಿದೆ. ಅಲ್ಲದೆ 1.6 ಲಕ್ಷ ಬೆಡ್‌ಗಳ ಕೊರತೆ ಇರುವುದು ಇದಕ್ಕಿಂತಲೂ ಅತ್ಯಂತ ಗಂಭೀರವಾಗಿದೆ. ಇದರ ಗಂಭೀರತೆಯನ್ನು ಅರಿತ ಕಾರಣಕ್ಕಾಗಿಯೇ ಹೈಕೋರ್ಟ್ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಾಖಲಿಸಿಕೊಂಡು ಸರ್ಕಾರಕ್ಕೆ ಚಾಟಿ ಬೀಸಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲ ಜಿಲ್ಲೆ, ತಾಲೂಕು ಮತ್ತು ಹೋಬಳಿ ಕೇಂದ್ರಗಳಲ್ಲಿನ ವೈದ್ಯಕೀಯ ಸೌಕರ್ಯದ ಕೊರತೆಯನ್ನು ಗಮನಿಸಿರುವ ಹೈಕೋರ್ಟ್, ಸುಮೊಟೊ ಕೇಸ್ ದಾಖಲಿಸಿಕೊಂಡು ವಿಚಾರಣೆಗೆ ಹಾಜರಾಗುವಂತೆ ರಾಜ್ಯ ಸರ್ಕಾರಕ್ಕೆ ಈಗಾಗಲೇ ನೋಟಿಸ್ ನೀಡಿದೆ. ರಾಜ್ಯದಲ್ಲಿನ ವೈದ್ಯಕೀಯ ಸೌಕರ್ಯ ಕೊರತೆಗೆ ಸದ್ಯದ ಕಾಂಗ್ರೆಸ್ ಸರ್ಕಾರ ಮಾತ್ರ ಕಾರಣವಲ್ಲ. ಈ ಹಿಂದಿನ ಎಲ್ಲ ಸರ್ಕಾರಗಳು ಅದಕ್ಕೆ ಹೊಣೆ. ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ವೈದ್ಯಕೀಯ ಸೌಕರ್ಯಗಳ ಕೊರತೆಯಿಂದ ಆದ ಹಾನಿಯ ಅಂದಾಜು ಇದ್ದರೂ, ಅವುಗಳ ಪರಿಹಾರಕ್ಕೆ ಯಾವುದೇ ಗಂಭೀರ ಕ್ರಮಗಳನ್ನ ಕೈಗೊಳ್ಳಲಿಲ್ಲ.

ಕೋವಿಡ್ ಸಂಕಷ್ಟ ದೂರವಾದ ನಂತರವೂ ರಾಜ್ಯದ ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ತಜ್ಞ ವೈದ್ಯರ ನೇಮಕ ಮಾಡಿಕೊಳ್ಳಲಿಲ್ಲ. ಜೊತೆಗೆ ಇನ್ನುಳಿದ ಅಗತ್ಯ ಸಿಬ್ಬಂದಿಗಳ ನೇಮಕಕ್ಕೂ ಸರ್ಕಾರ ಆದ್ಯತೆ ನೀಡದ ಕಾರಣ ಇವತ್ತು ಸರ್ಕಾರಿ ಆಸ್ಪತ್ರೆಗಳತ್ತ ಜನ ಹೋಗದಂತಹ ಸ್ಥಿತಿ ನಿರ್ಮಾಣವಾಗಿದೆ.

ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರತಿನಿತ್ಯ ಕನಿಷ್ಠ ಒಂದು ಸಾವಿರ ಹೊರ ರೋಗಿಗಳು ತಪಾಸಣೆಗೆ ಒಳಗಾಗುತ್ತಾರೆ. ಆದರೆ ಅಷ್ಟು ಜನರಿಗೆ ಚಿಕಿತ್ಸೆ ತಪಾಸಣೆ ನಡೆಸಲು ಬೇಕಾದ ವೈದ್ಯರೆ ಇಲ್ಲ. ಇರುವ ವೈದ್ಯರಿಗೆ ಒತ್ತಡ ಹೆಚ್ಚಾಗುತ್ತಿದೆ. ಸಿಬ್ಬಂದಿಗಳು ಕೆಲಸ ನಿರ್ವಹಿಸಲು ನಿರಾಸಕ್ತಿ ತೋರುವುದು ಸರ್ವೆ ಸಾಮಾನ್ಯವಾಗಿದೆ. ಆರೋಗ್ಯ ಕ್ಷೇತ್ರದ ಸಿಬ್ಬಂದಿಗಳು ಶಿಕ್ಷಣ ಇಲಾಖೆ, ಕಂದಾಯ ಇಲಾಖೆ ರೀತಿಯಲ್ಲಿ ನಿರ್ದಿಷ್ಟ ಗಂಟೆಗಳ ಕಾಲ ನೌಕರರು ಹಾಗೆ ನಿರ್ದಿಷ್ಟ ಗಂಟೆಗಳವರೆಗೆ ಕೆಲಸ ಮಾಡಬೇಕು ಎನ್ನುವ ಒತ್ತಡ ಸರಿಯಲ್ಲ. ಆರೋಗ್ಯದ ವಿಷಯದಲ್ಲಿ ಸಿಬ್ಬಂದಿಗಳು ಉದಾಸೀನ ಆಗದ ರೀತಿಯಲ್ಲಿ ಕೆಲಸದ ಸಮಯವನ್ನ ನಿಗದಿಗೊಳಿಸಬೇಕಿದೆ. ಅಂದಾಗ ಮಾತ್ರ ಸರ್ಕಾರಿ ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ದೊರೆಯಲು ಸಾಧ್ಯ. ಬಡವರ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರ ಆರೋಗ್ಯ ಗ್ಯಾರಂಟಿ ಯೋಜನೆಯಂದನ್ನ ಜಾರಿಗೊಳಿಸುವ ಅನಿವಾರ್ಯತೆಯನ್ನು ಅರ್ಥಮಾಡಿಕೊಳ್ಳಬೇಕಿದೆ.

## ದ್ವೇಷ ರಾಜಕೀಯದ ವಿರುದ್ಧ ರಾಜ್ಯವ್ಯಾಪಿ ಅಭಿಯಾನ ನಿಮಿತ್ತ ಲೇಖನ

# ದ್ವೇಷ ಅಳಿಸೋಣ, ದೇಶ ಉಳಿಸೋಣ




ಕಲ್ಲಿನಿಂದ ಕತ್ತಲನ್ನು ಓಡಿಸಲಾಗದು, ದ್ವೇಷದಿಂದ ದ್ವೇಷವನ್ನು ಅಳಿಸಲಾಗದು, ಬೆಳಕು ಮತ್ತು ಪ್ರೀತಿ ಆ ಕೆಲಸ ಮಾಡುತ್ತದೆ. ಅಂತಹ ಶಕ್ತಿ ಬೆಳಕು ಮತ್ತು ಪ್ರೀತಿಯಲ್ಲಿ ಇದೆ. ನಾವು ಮನುಜರು ಮನಸ್ಸು ಮಾಡಿದರೆ ದ್ವೇಷವನ್ನು ನಿರ್ಮೂಲ ಮಾಡುವ ಶಕ್ತಿಯಿದೆ. ಯಾವಾಗಲೂ ಕೇಡು ಬಗೆಯುವ ಸ್ನೇಹಿತನೆಂದರೆ ಅದು ಸಿಟ್ಟು. ಅದನ್ನು ನಾವು ತಾಳ್ಮೆಯಿಂದ ಬಳಸಿಕೊಂಡರೆ, ಉಪಯೋಗಿಸಿಕೊಂಡರೆ ಕೇಡು ಸಹ ಸ್ನೇಹಿತನಾಗುತ್ತಾನೆ. ಹೃದಯವಂತಿಕೆ ಇಲ್ಲದಿರುವಾಗ ಬುದ್ಧಿವಂತಿಕೆ ಎಷ್ಟಿದ್ದರೂ ಪ್ರಯೋಜನವಾಗದು.

ನಾವೆಲ್ಲರೂ ಒಂದೇ. ಈ ನೆಲ, ಜಲ, ಗಾಳಿ, ನಾಡು-ನುಡಿ ನಮ್ಮದು. ನಮ್ಮದು ಪ್ರಜಾಪ್ರಭುತ್ವ ದೇಶ. ಈ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಗೂ ತಮ್ಮ ಹಕ್ಕುಗಳನ್ನು ಚಲಾಯಿಸುವ ಸ್ವಾತಂತ್ರ್ಯವಿದೆ. ದೇಶದ ಭವಿಷ್ಯ, ದೇಶದ ಅಭಿವೃದ್ಧಿಯ ಬಗ್ಗೆ ಚಿಂತಿತರಾಗುವುದು ಪ್ರತಿಯೊಬ್ಬ ಭಾರತೀಯನ ಜವಾಬ್ದಾರಿಕೆಯಾಗಿದೆ. ನಮ್ಮ ದೇಶದ ಭವ್ಯ ಇತಿಹಾಸವನ್ನು ಬಲ್ಲವರಿಗೆ ದೇಶದ ಈಗಿನ ಸ್ಥಿತಿ-ಗತಿಯ ಬಗ್ಗೆ ಕಳವಳ ಮೂಡುವುದು ಸಹಜವಾಗಿದೆ. ಯುವ ಸಮೂಹದಲ್ಲಿ ಕೋಮು ವಿಷಬೀಜವನ್ನು ಬಿತ್ತಿ ರಾಜಕೀಯ ಪಕ್ಷಗಳು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿವೆ.

ಭಾರತೀಯರಲ್ಲಿ ಧರ್ಮ-ಧರ್ಮಗಳ ಹೆಸರಿನಲ್ಲಿ, ಜಾತಿ-ಜಾತಿಯ ಹೆಸರನ್ನು ಪರಸ್ಪರ ದ್ವೇಷ ಅಸೂಯೆ ಹಗೆ ಧಗೆ ಮತ್ಸರಗಳನ್ನು ತುಂಬಿದಾಗ, ಸಮಾಜದಲ್ಲಿ ಶಾಂತಿ ನೆಲೆಸುವುದಾದರೂ ಹೇಗೆ? ನಾವೆಲ್ಲರೂ ಈ ಬಗ್ಗೆ ಗಂಭೀರವಾಗಿ ಚಿಂತಿಸಬೇಕು. ದೇಶದಲ್ಲಿ ದ್ವೇಷ ಮಿತಿಮೀರುತ್ತಿದೆ. ಬಾಬರೀ ಮಸೀದಿ, ರಾಮಜನ್ಮಭೂಮಿ ವಿವಾದದ ಹುಯಿಲೆಬ್ಬಿಸಿದ ದೇಶದ ಜನರಲ್ಲಿ ದ್ವೇಷವನ್ನು ತುಂಬಿ ಕೆರಳಿಸಿದ ಆ ಘಟನೆಯಿಂದ ದೇಶದಲ್ಲಿ ದ್ವೇಷದ ರಾಜಕೀಯ ಪ್ರಾರಂಭವಾಯಿತು. ದಲಿತರನ್ನು, ಅಲ್ಪಸಂಖ್ಯಾತರನ್ನು ಹಿಂದುಳಿದ ವರ್ಗದವರನ್ನು ನಿಂದಿಸುವುದು, ಕೊಲ್ಲುವುದು ತಲೆ ತಗ್ಗಿಸುವ ವಿಚಾರ.

ಲಿಂ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಮಠದ ಪೀಠಾಧಿಕಾರವನ್ನು ವಹಿಸಿಕೊಂಡ ಮೇಲೆ ಗದ್ದುಗೆಯ ಪಕ್ಕದಲ್ಲಿದ್ದ ಲಿಂಗವಿಲ್ಲದವರಿಗೆ ಪ್ರವೇಶವಿಲ್ಲವೆಂಬ ಫಲಕವನ್ನು ಯಾರ ಮರ್ಜಿಯನ್ನು ಕಾಯದೆ ತೆರವುಗೊಳಿಸಿದರು. ಅವರ ಈ ನಡೆಯು ಭಕ್ತ ಸಮಯುದಾಯಕ್ಕೆ ಆಶ್ಚರ್ಯ ಮತ್ತು ಭಯವನ್ನುಂಟುಮಾಡಿತು. ಹಿಂದು, ಇಸ್ಲಾಂ, ಕ್ರೈಸ್ತ, ಜೈನ್, ಬೌದ್ಧ, ಧರ್ಮಗಳಲ್ಲದೆ ಹಿಂದೂ ಧರ್ಮದಲ್ಲಿನ ವಿಪ್ರರಿಂದ ಹಿಡಿದು ಅಂತ್ಯಜರವರೆಗೂ ಎಲ್ಲ ಧರ್ಮ, ಎಲ್ಲ ಕೋಮಿನವರಿಗೂ ಮಠದ ಬಾಗಿಲನ್ನು ಮುಕ್ತಗೊಳಿಸಿ ಮಠವನ್ನು ಸರ್ವಜನಾಂಗದ ಶಾಂತಿಯ ತೋಟವನ್ನಾಗಿಸಿದರು.

ಸಹಬಾಳ್ವೆಯೇ ನಮ್ಮ ಬದುಕಿಗೆ ನೆಮ್ಮದಿಯಾಗಬೇಕು. ಅದಕ್ಕೆ ಸನ್ಮಾರ್ಗದಲ್ಲಿ ಹಿರಿಯರ ಮಾರ್ಗದರ್ಶನದಲ್ಲಿ ಸಿಟ್ಟು, ದ್ವೇಷವನ್ನು ಬಿಟ್ಟು ಮುನ್ನೆಡೆದಿದ್ದೇ ಆದರೆ ನಮ್ಮ ನೆಲ ಸಮೃದ್ಧವಾಗುತ್ತದೆ. ಜನರಲ್ಲಿ ಪ್ರೀತಿಯ ಅರಮನೆಯನ್ನೇ ಕಟ್ಟಬಹುದು. ಎಲ್ಲರೂ ಪ್ರೀತಿ, ವಿಶ್ವಾಸ, ಮತ್ತು ಸಹಬಾಳ್ವೆಯ ಜೀವನ ನಡೆಸುತ್ತ ಸುಖವಾಗಿ ಬದುಕಬಹುದು.

ರಾಜ್ಯದಲ್ಲಿ ಸಹಬಾಳ್ವೆ ಸೌಹಾರ್ದವನ್ನು ಕೆಡಿಸುವ ಭಾಷಣಕಾರರು ಮೆರೆಯುತ್ತಿದ್ದಾರೆ. ಅಂತಹವರ ಮನಸ್ಸನ್ನು ಬದಲಾಯಿಸಬೇಕು. ಸರಿ ತಪ್ಪುಗಳ ಕಲ್ಪನೆ ಅವರಿಗಾಗಬೇಕು, ದೇಶಭಕ್ತಿ, ನಾಡು-ನುಡಿಯ ಬಗ್ಗೆ ಪಾಠವಾಗಬೇಕು. ಇವರ ಒಂದು ತಪ್ಪಿನಿಂದ ಅಮಾಯಕ ಜನ ಮತ್ತು ಕುಟುಂಬಗಳು ಬೀದಿ ಪಾಲಾಗಿವೆ, ನಾಶವಾಗಿದ್ದಾರೆ, ಎಲ್ಲವನ್ನು ಕಳೆದುಕೊಂಡು ನಿರ್ಗತಿಕರಾಗಿದ್ದಾರೆ, ಇದಕ್ಕೆ ಯಾರು ಹೊಣೆಗಾರರು..? ಇದನ್ನು ನಿರ್ಮೂಲನೆ ಮಾಡಬೇಕು. ನಾನು ಅನ್ನುವ ಬದಲು ನಾವು ಎನ್ನುವ ಗುಣವನ್ನು ಬೆಳೆಸಿಕೊಳ್ಳಬೇಕು.

ಅಲ್ಪ ಸಂಖ್ಯಾತ ಸಮುದಾಯಗಳ ವಿರುದ್ಧ ಬಹುಸಂಖ್ಯಾತರನ್ನು ಎತ್ತಿಕಟ್ಟುವ ಪ್ರಯತ್ನಗಳು, ನಿರ್ಭೀತ ಪ್ರಾಮಾಣಿಕ ಪತ್ರಕರ್ತರನ್ನು ಬೆದರಿಸಿ ಕಾನೂನಿನ ಕುಣಿಕೆಗೆ ಸಿಲುಕಿಸುವ ಕ್ರಮಗಳೂ ನಡೆಯುತ್ತಿರುವದು ವಿಷಾದನೀಯ. ದ್ವೇಷ, ಕೋಮುಪ್ರಚೋದನಕಾರಿ ಭಾಷಣ ಮಾಡುವವರ ವಿರುದ್ಧ ಸಮರ ಸಾರಿ ಅಂತವರನ್ನು ಮೂಲೆಗುಂಪು ಮಾಡಬೇಕು. ಯುವ ಸಮುದಾಯಕ್ಕೆ ಈ ಬಗ್ಗೆ ಮನವರಿಕೆ ಮಾಡಿಕೊಡಬೇಕಾಗಿದೆ. ಮುಂದಿನ ಕರಾಳ ದಿನಗಳ ಬಗ್ಗೆ ಊಹಿಸಿ ಮೌಲ್ಯಯುತ ಮನಸ್ಸುಗಳನ್ನು ಸೇರಿಸಿ ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾದ ಕರ್ನಾಟಕ ರಾಜ್ಯ ಘಟಕವು ಈ ದ್ವೇಷ ರಾಜಕೀಯದ ವಿರುದ್ಧ 'ದ್ವೇಷ ಅಳಿಸೋಣ ದೇಶ ಉಳಿಸೋಣ' ಎನ್ನುವ ಅಭಿಯಾನವನ್ನು 01-11-2023ರಿಂದ ರಾಜ್ಯಾದ್ಯಂತ ಹಮ್ಮಿಕೊಂಡಿದೆ.



ಎಲ್ಲರೂ ಕನ್ನಡಿಗರೂ ಈ ಅಭಿಯಾನದಲ್ಲಿ ನ್ವಮ್ಮೊಂದಿಗೆ ಕೈಜೋಡಿಸಬೇಕೆಂದು ವಿನಂತಿ.

**– ಜನಾಬ ಜುನೇದ ಹೆಚ. ಉಮಚಗಿ.** ಗದಗ.

## ಮಹಾಲಕ್ಷ್ಮೀ ಕುಬೇರ ಪೂಜಾ ಕಾರ್ಯ ನೆರವೇರಿಸಲು ಸೂಕ್ತ ಸಮಯ ಯಾವುದು?

# ದೀಪಾವಳಿ ಪೂಜಾ ಮುಹೂರ್ತ



* ನ. 12, ರವಿವಾರದಂದು ದೀಪಾವಳಿ ಅಮಾವಾಸ್ಯೆಯು ಮಧ್ಯಾಹ್ನ 2-45 ಗಂಟೆಗೆ ಆರಂಭವಾಗಿ ನ.13, ಸೋಮವಾರ ಮಧ್ಯಾಹ್ನ 2-57 ಗಂಟೆಗೆ ಮುಕ್ತಾಯವಾಗುವುದು. ನ. 12, ರವಿವಾರ ಮಧ್ಯಾಹ್ನ 1-30ರ ನಂತರದಿಂದ ಸಾಯಂಕಾಲ 6 ಗಂಟೆಯವರೆಗೆ ಹಿರಿಯರ ಪೂಜೆ ಮಾಡುವುದು. ಈ ದಿವಸ ನರಕ ಚತುರ್ದಶಿ.

ನ.13, ಸೋಮವಾರ ಮುಹೂರ್ತ ರಾಜವೆಂಬ ಶಿವ ಲಿಖಿತದ ಪ್ರಕಾರ ಮುಂಜಾನೆ 6ರಿಂದ 7-26 ಗಂಟೆವರೆಗ ಅಮೃತ (ಮುಂಜಾನೆ 7-30ರಿಂದ 9 ಗಂಟೆವರೆಗೆ ರಾಹುಕಾಲ ಅಶುಭ) ಮುಂಜಾನೆ 9-12ರಿಂದ ಮುಂಜಾನೆ 11-36 ಗಂಟೆವರೆಗೆ ಅಮೃತ, ಪ್ರಾಚೀನ ಶಿವಲಿಖಿತ ಗೌರಿ ಪಂಚಾಂಗದ ಪ್ರಕಾರ ಮಧ್ಯಾಹ್ನ 12ರಿಂದ 1-30 ಗಂಟೆವರೆಗೆ ಲಾಭ. ಮಧ್ಯಾಹ್ನ 1-30ರಿಂದ 3 ಗಂಟೆವರೆಗೆ ಅಮೃತ, ಮಧ್ಯಾಹ್ನ 3ರಿಂದ 4-30 ಗಂಟೆವರೆಗೆ ಲಾಭ, ರಾತ್ರಿ 7-30ರಿಂದ 9 ಗಂಟೆವರೆಗೆ ಲಾಭ, ಗೃಹದಲ್ಲಿ ಹಾಗೂ ಅಂಗಡಿಗಳಲ್ಲಿ ಮಹಾಲಕ್ಷ್ಮೀ ಕುಬೇರ ಪೂಜಾ ಮಾಡುವುದಕ್ಕೆ ಈ ಪ್ರಕಾರ ಶುಭ ಸಮಯಗಳಿವೆ

ನ.12ರ ದಿವಸ ಪ್ರಾಚೀನ ಶಿವಲಿಖಿತ ಗೌರಿ ಪಂಚಾಂಗದ ಪ್ರಕಾರ ಮಧ್ಯಾಹ್ನ 3ರಿಂದ 4-30 ಗಂಟೆವರೆಗೆ ಅಮೃತ, (ಸಾಯಂಕಾಲ 4-30ರಿಂದ 6 ಗಂಟೆವರೆಗೆ ರಾಹುಕಾಲ ಅಶುಭ) ಸಾಯಂಕಾಲ 6ರಿಂದ 7-30 ಗಂಟೆವರೆಗೆ ಶುಭ, ರಾತ್ರಿ 7-30ರಿಂದ 9 ಗಂಟೆವರೆಗೆ ಅಮೃತ, ಮುಹೂರ್ತರಾಜವೆಂಬ ಶಿವಲಿಖಿತ ಪ್ರಕಾರ 8-24ರಿಂದ 10-48 ಗಂಟೆವರೆಗೆ ಅಮೃತ, ಈ ಶುಭ ಸಮಯದಲ್ಲಿ ವರ್ತಕರು ಮಹಾಲಕ್ಷ್ಮೀ ಕುಬೇರ ಪೂಜಾ ಮಾಡುವುದು ಶುಭಪ್ರದವು.

ನ. 14, ಸೋಮವಾರ ಬೆಳಿಗ್ಗೆ ಮಹಾಲಕ್ಷ್ಮೀ ಕುಬೇರ ಪೂಜಾ ಮಾಡುವವರು ಈ ದಿನ ಬೆಳಿಗ್ಗೆ 12-32ರಿಂದ 2-36 ಗಂಟೆವರೆಗೆ ಸಿಂಹಲಗ್ನ, ಬೆಳಿಗ್ಗೆ 2-36ರಿಂದ 4-38 ಗಂಟೆವರೆಗೆ ಕನ್ಯಾಲಗ್ನ, ಈ ದಿನ ಬೆಳಿಗೆ 3-22ರಿಂದ 4-40 ಗಂಟೆವರೆಗೆ ಬ್ರಾಹ್ಮೀ ಮುಹೂರ್ತ, ಹೀಗೆ ಶುಭ ಸಮಯಗಳಿರುತ್ತವೆ.

ಕಾರ್ತಿಕ ಶುಕ್ಲ ಮಂಗಳವಾರ ನ. 14ರ ದಿನ ಮುಹೂರ್ತ ರಾಜವೆಂಬ ಶಿವಲಿಖಿತ ಚಕ್ರದ ಪ್ರಕಾರ ಮುಂಜಾನೆ 6ರಿಂದ 6-48 ಗಂಟೆವರೆಗೆ ಅಮೃತ, ಮುಂಜಾನೆ 10-48ರಿಂದ ಮಧ್ಯಾಹ್ನ 1-12 ಗಂಟೆವರೆಗೆ ಅಮೃತ (ಮಧ್ಯಾಹ್ನ 3ರಿಂದ 4-30 ಗಂಟೆವರೆಗೆ ರಾಹುಕಾಲ ಅಶುಭ) ಸಾಯಂಕಾಲ 4-30ರಿಂದ 6 ಗಂಟೆವರೆಗೆ ಅಮೃತ, ರಾತ್ರಿ 8.24ರಿಂದ 9.12 ಗಂಟೆವರೆಗೆ ಅಮೃತ, ಈ ಪ್ರಕಾರ ಶುಭ ಸಮಯಗಳಿರುತ್ತವೆ. ಈ ದಿನ ಉತ್ತರ ಪೂಜೆ ಮಾಡಬಾರದು. ಮರುದಿನ ನ. 15ರಂದು ಸೂರ್ಯೋದಯದ ನಂತರ ಉತ್ತರ ಪೂಜೆ ಮಾಡಿ ವಿಸರ್ಜನೆಗೊಳಿಸುವುದು ಉತ್ತಮ.

**– ಶ್ರೀ ಗುರುಪಾದಯ್ಯ ಶಾಸ್ತ್ರಿಗಳು.** ಕೆಎಚ್‌ಪಿ ಕಾಲೋನಿ, ಹುಲಕೋಟಿ.

# ಕಾರ್ಮಿಕ ಕಲ್ಯಾಣ ಸಂಸ್ಥೆಯಿಂದ ಕರ್ನಾಟಕ ರಾಜ್ಯೋತ್ಸವ



**■ ವಿಜಯಸಾಕ್ಷಿ ಸುದ್ದಿ, ಗದಗ**

ಕಾರ್ಮಿಕ ಕಲ್ಯಾಣ ಸಂಸ್ಥೆ ಗದಗ, ಜೈ ಹೋ ಕರ್ನಾಟಕ ಪರಿವರ್ತನಾ ವೇದಿಕೆ ಕರ್ನಾಟಕ ಕಟ್ಟಡ ಇತರೆ ನಿರ್ಮಾಣ ಕಾರ್ಮಿಕರ ಒಕ್ಕೂಟ, ಅಮರಶಿಲ್ಪಿ ಜಕಣಾಚಾರಿ ಕಟ್ಟಡ ಮತ್ತು ಕೂಲಿ ಕಾರ್ಮಿಕರ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಯಾಲಯ ಆವರಣದಲ್ಲಿ 68ನೇ ಕರ್ನಾಟಕ ರಾಜ್ಯೋತ್ಸವದ ಕನ್ನಡ ಧ್ವಜಾರೋಹಣ ಕಾರ್ಯಕ್ರಮ ಜರುಗಿತು. ಸಂಘದ ಮುಖಂಡರಾದ ಝುಡ್.ಡಿ. ಬೆಲೇರಿ, ಈಶಪ್ಪ ಬಳ್ಳಾರಿ, ಮಹಮ್ಮದ ಇರ್ಫಾನ ಡಂಬಳ, ಶಂಕರಗೌಡ ಭರಮಗೌಡರ ಧ್ವಜಾರೋಹಣ ನೆರವೇರಿಸಿದರು.

ಈ ಸಂದರ್ಭದಲ್ಲಿ ನಿಂಗಪ್ಪ ಕಟ್ಟಿಮನಿ, ಮಹಮ್ಮದ ಯೂಸೂಫ ಬೇಪಾರಿ, ನಾಸೀರ ಚಿಕೇನಕೊಪ್ಪ, ಶಂಕರ ಗುರುಬಸಣ್ಣವರ, ರಮೇಶ ಬಿಳೆಯಲಿ, ಮೈನು ಗುಜಮಾಗಡಿ, ಇಬ್ರಾಹಿಂ ಹಳ್ಳಿಕೇರಿ, ರಶೀದ ಬಳ್ಳಾರಿ, ಇಸ್ಮಾಯಲ ರೋಣ, ಅಲ್ಲಾಭಕ್ಷ ದೊಡ್ಡಮನಿ, ಅಶ್ಪಾಕ ಕೊಪ್ಪಳ, ಖಾಜಾಸಾಬ ಗಬ್ಬೂರ, ಶೌಕತ ಮುರಾದಾಖಾನ, ಅಹ್ಮದ ಕೊಟ್ಟೂರು, ದುರಗಪ್ಪ ಗುಡಿಮನಿ, ಪ್ರಕಾಶ ನಾಯ್ಕರ, ರಮೇಶ ವಾಲ್ಮೀಕಿ, ಫಾರೂಕ ಸಿರಂಜಿ, ಮಲ್ಲಿಕಾರ್ಜುನ ವಾಲ್ಮೀಕಿ, ಭೀಮಪ್ಪ ಪೂಜಾರ, ಆರೀಫ ಈಟಿ, ವಸಂತ ದೇವದುರ್ಗ, ಗಂಗಮ್ಮ, ರತ್ನಶಿ ಕುರಗೋಡ, ಪಾಲಾಕ್ಷವ್ವ, ಕಲಾವತಿ ವಾಲ್ಮೀಕಿ, ತನವೀರ ಮುಜಾವರ, ಬಾಬಾಜಾನ ಅತ್ತಾರ, ಚನ್ನವೀರಗೌಡ ಪಾಟೀಲ, ನಿಂಗಪ್ಪ ಸುಳ್ಳದ, ಫೈಜಾನ ಧಾರವಾಡ, ಶೋಹೆಬ್ ಇಲಾಳ, ಕೆ. ಬಿ. ಕುಡಗುಂಟಿ, ಮೋಹಿದ್ದೀನ ಜಿಲಾನಿ, ಗುಳಗುಂದಿ ಉಪಸ್ಥಿತರಿದ್ದರು.

# ಮನೋರಮಾ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ



**■ ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಮನೋರಮಾ ಕಾಲೇಜಿನಲ್ಲಿ 68ನೇ ಕನ್ನಡ ರಾಜ್ಯೋತ್ಸವವನ್ನು ಕನ್ನಡ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವದರೊಂದಿಗೆ ವಿಜೃಂಭಣೆಯಿಂದ ಆಚರಿಸಲಾಯಿತು.

ಮಹಾವಿದ್ಯಾಲಯದ ಪ್ರಾಚಾರ್ಯ ಬಿ.ಎಸ್. ಹಿರೇಮಠ ಮಾತನಾಡಿ, ಕನ್ನಡ ಬರಿಯ ಭಾಷೆ ಅಷ್ಟೇ ಅಲ್ಲ, ನಮ್ಮ ಬದುಕು ಕೂಡ. ನಮ್ಮ ನಡೆ-ನುಡಿಯಲ್ಲಿ ಕನ್ನಡತನವಿರಲಿ. ನಮ್ಮ ಕನ್ನಡ ನಾಡಿನ ಭಾಷೆ, ಪರಂಪರೆಯನ್ನು ವಿಶ್ವದೆಲ್ಲೆಡೆ ಪಸರಿಸೋಣ. ಕನ್ನಡದ ಏಳ್ಗೆಗಾಗಿ ಕಂಕಣ ಬದ್ಧರಾಗೋಣ ಎಂದರು.

ಸಭೆಯ ಅಧ್ಯಕ್ಷತೆಯನ್ನು ಸಂಸ್ಥೆಯ ಚೇರಮನ್ ಎನ್. ಎಮ್. ಕುಡತರಕರ ವಹಿಸಿ ಮಾತನಾಡಿ, ಕನ್ನಡ ನಾಡು-ನುಡಿಗೆ ಶ್ರಮಿಸಿದ ಮಹಾತ್ಮರನ್ನು ನೆನೆದು, ನಾಡಿನ ವೈಶಿಷ್ಟತೆಯನ್ನು ಪ್ರಶಂಸಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರುಗಳಾದ ಮಂಜುನಾಥ ಕುಡತರಕರ ಸಂಜಯಕುಮಾರ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕರುಗಳಾದ ಪ್ರೊ. ಸವಿತಾ ಪೂಜಾರ, ಪ್ರೊ. ಅಲ್ವಿನಾ, ಚೈತ್ರಾ ದಲಬಂಜನ, ಪ್ರೊ. ರಾಘವೇಂದ್ರ ನವಲಗುಂದ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಪೂಜಾ ಹಾಗೂ ತಬಸುಮ ಕಾರ್ಯಕ್ರಮ ನಿರ್ವಹಿಸಿದರು.

# ಬೆಳಗಾವಿ ಚಳಿಗಾಲದ ಅಧಿವೇಶನದಲ್ಲೇ ಸದಾಶಿವ ಆಯೋಗದ ವರದಿ ಮಂಡಿಸಲು ಸಿಎಂಗೆ ಮನವಿ: ಜಿ ಪರಮೇಶ್ವರ

**■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿಯೇ ಎಜೆ ಸದಾಶಿವ ಆಯೋಗದ ವರದಿ ಮಂಡಿಸಿ ಒಳ ಮೀಸಲಾತಿ ಕಲ್ಪಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ ಮಂಗಳವಾರ ತಿಳಿಸಿದ್ದಾರೆ. ಒಳ ಮೀಸಲಾತಿ ಸಂಬಂಧ ಸದಾಶಿವ ಆಯೋಗದ ವರದಿ ಜಾರಿ ಕುರಿತಂತೆ ಪರಿಶಿಷ್ಟ ಜಾತಿಗೆ ಸೇರಿದ ಸಚಿವರು ಮತ್ತು ಶಾಸಕರು ನಡೆಸಿದ ಸಭೆ ಬಳಿಕ ಅವರು ಮಾತನಾಡಿದರು.

'ಚುನಾವಣೆ ಸಂದರ್ಭದಲ್ಲಿ ಒಳ ಮೀಸಲಾತಿ ಕುರಿತು ಚಿತ್ರದುರ್ಗ ನಗರದಲ್ಲಿ ಎಸ್‌ಸಿ-ಎಸ್‌ಟಿ ಸಮಾವೇಶ ನಡೆಸಲಾಗಿತ್ತು. ಆಗ ಹತ್ತು ಹಲವು ಘೋಷಣೆಗಳನ್ನು ಮಾಡಿದ್ದೆವು. ಅದರಲ್ಲಿ ಸದಾಶಿವ ಆಯೋಗದ ವರದಿಯನ್ನು ಮೊದಲ ಅಧಿವೇಶನದಲ್ಲಿಯೇ ಸದನದ ಮುಂದಿಡಲಾಗುವುದು ಎಂದು ಭರವಸೆ ನೀಡಲಾಯಿತು. ಆದರೆ, ಕಾರಣಾಂತರಗಳಿಂದ ಅದು ಸಾಧ್ಯವಾಗಿಲ್ಲ' ಎಂದು ಹೇಳಿದರು.

# ರೈತರಿಗಾಗಿ ಸಂಸದ ಸಂಗಣ್ಣ ಕರಡಿ ಉಪವಾಸ ಸತ್ಯಾಗ್ರಹ



**■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ರಾಜ್ಯ ಸರಕಾರದ ಕಾರ್ಯವೈಖರಿ ವಿರೋಧಿಸಿ ಕೊಪ್ಪಳ ಜಿಲ್ಲಾಡಳಿತ ಭವನದ ಮುಂದೆ ಕೊಪ್ಪಳ ಸಂಸದ ಸಂಗಣ್ಣ ಕರಡಿ ಉಪವಾಸ ಸತ್ಯಾಗ್ರಹ ಆರಂಭಸಿದ್ದಾರೆ.

ಎಂಎಲ್ಸಿ ಹೇಮಲತಾ ಸೇರಿದಂತೆ ಬಿಜೆಪಿ ಮುಖಂಡರು, ಕಾರ್ಯಕರ್ತರು ಸಾಥ್ ನೀಡಿದ್ದಾರೆ. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಪರಿವರ್ತಕ ಸಹಿತ ಉಚಿತ ಮೂಲಭೂತ ಸೌಕರ್ಯ ಒದಗಿಸುವ ಯೋಜನೆ ರದ್ದುಪಡಿಸುವ ಆದೇಶ ಹಿಂಪಡೆಯಬೇಕು, ರೈತರ ಪಂಪ್ ಸೆಟ್ ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಸೇರಿದಂತೆ ವಿವಿಧ ಬೇಡಿಕೆ ಮುಂದಿಟ್ಟುಕೊಂಡು ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ. ರಾಜ್ಯ ಸರ್ಕಾರ ನೂತನ ಆದೇಶ ನೀಡುವವರೆಗೂ ಸತ್ಯಾಗ್ರಹ ಮುಂದುವರೆಯುತ್ತದೆ ಎಂದು ಸಂಸದರು ತಿಳಿಸಿದರು.

## ಗುರುವಂದನಾ, ಸ್ನೇಹ ಸಮ್ಮೇಳನ ಕಾರ್ಯಕ್ರಮದಲ್ಲಿ ಬಿ. ಕಲ್ಲೇಶ ಅಭಿಮತ

# ಗುರುಗಳಿಗೆ ವಿದ್ಯಾರ್ಥಿಗಳೇ ಆಸ್ತಿ



**■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

18 ವರ್ಷಗಳ ಹಿಂದೆ ಈ ಶಾಲೆಯಲ್ಲಿ ಓದಿ, ಬೇರೆ ಬೇರೆ ಕಡೆಗಳಲ್ಲಿ ಚದುರಿ ಹೋಗಿ, ವಿವಿಧ ಉದ್ಯೋಗದಲ್ಲಿ ತೊಡಗಿರುವ ವಿದ್ಯಾರ್ಥಿಗಳು ಪುನಃ ಒಂದೆಡೆ ಸೇರಿ ಗುರುವಂದನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಸಂತಸವನ್ನುಂಟುಮಾಡಿದೆ. ಗುರುಗಳಿಗೆ ವಿದ್ಯಾರ್ಥಿಗಳೇ ಆಸ್ತಿ ಎಂದು ಬೆಂಗಳೂರಿನ ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆಯ ನಿರ್ದೇಶಕ ಬಿ.ಕಲ್ಲೇಶ ಹೇಳಿದರು.

ಅವರು ಕೊಪ್ಪಳ ತಾಲೂಕಿನ ಹಿರೇಸಿಂದೋಗಿ ಸರಕಾರಿ ಪ್ರೌಢಶಾಲೆಯಲ್ಲಿ 2004-05ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಹಮ್ಮಿಕೊಂಡ ಗುರುವಂದನಾ ಹಾಗೂ ಸ್ನೇಹ ಸಮ್ಮೇಳನ ಕಾರ್ಯಕ್ರಮದಲ್ಲಿ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದರು. ಕಪ್ಪತ್ತಮಠದ ಚಿದಾನಂದ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಹಿರೇಸಿಂದೋಗಿಯ ಸರ್ಕಾರಿ ಪ.ಪೂ ಮಹಾವಿದ್ಯಾಲಯದ ಪ್ರಾಚಾರ್ಯ ಹನುಮಂತಪ್ಪ ಅಂಡಗಿ ಚಿಲವಾಡಗಿ ಕಾರ್ಯಕ್ರಮ ಉದ್ಘಾಟಿಸಿದರು. ಗ್ರಾ.ಪಂ ಉಪಾಧ್ಯಕ್ಷರಾದ ನಿರ್ಮಲವ್ವ ಷಣ್ಮುಖನ ಗೌಡ ಮಾಲಿಪಾಟೀಲ, ಅಧ್ಯಕ್ಷ ಕೇಶವರೆಡ್ಡಿ ಮಾದಿನೂರು, ರೇವಯ್ಯ ಮಠದ, ಮುಖ್ಯೋಪಾಧ್ಯಾಯ ದೇವಪ್ಪ ಬಚ್ಚಕ್ಕನವರ, ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಮಲ್ಲಪ್ಪ ಗುಡದಣ್ಣವರ, ಪ್ರಮುಖರಾದ ಯಂಕಣ್ಣ ಕೊಳ್ಳಿ, ಹೊನ್ನಪ್ಪ ಗದ್ದಿ, ಪ್ರಭುಗೌಡ ಮೈನಹಳ್ಳಿ, ರೇವಣಸಿದ್ದನಗೌಡ, ಸದಾಶಿವರೆಡ್ಡಿ ಮಾದಿನೂರು, ಚೆನ್ನಯ್ಯ ಪೊಲೀಸಪಾಟೀಲ, ಚಂದ್ರಶೇಖರ, ಸುಭಾಷ್ ರೆಡ್ಡಿ ಮೈನಹಳ್ಳಿ, ಮರಳಯ್ಯ ಮಠದ, ಚನ್ನನಗೌಡ ಮಾಲಿ ಪಾಟೀಲ, ರಾಜು ಎನ್. ಕೊಳ್ಳಿ, ರೇವಪ್ಪ ಬಿಸರಳ್ಳಿ, ಸಿಡ್ಲಪ್ಪ ಡಂಬ್ರಹಳ್ಳಿ, ಬಸನಗೌಡ ಶಂಕರಗೌಡ, ವೀರೇಶ ಸಜ್ಜನ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಗುರುಗಳಾದ ವೀರಣ್ಣ ವಾಲಿ, ಮಹಾಂತೇಶ ಚೆನ್ನಿ ನಾಯ್ಕರ್, ರೇಣುಕಾ ಹಡಗಲಿ, ಸುಮನ್ ಗಜಕೋಶ, ಸೋಮರೆಡ್ಡಿ ಡಂಬರಹಳ್ಳಿ, ನಾಗರಾಜ ಸುನಗ, ಸುಧೀಂದ್ರ ಜೋಶಿ ಹಾಗೂ ನಿವೃತ್ತ ಸೈನಿಕ ಶಂಕರಗೌಡ ಕುರಡಗಿ, ರಾಮಣ್ಣ ಬರಡ್ಡಿ, ದೇವರೆಡ್ಡಿ ಹೆಚ್. ಮಾದಿನೂರು, ಹನುಮನಗೌಡ ಆರ್.ಹಸರಗನ್ನವರ್, ಪಾಂಡುರಂಗ ಹಳೇಮನಿ, ಭೀಮೇಶ್ ಎಚ್.ಭೋವಿ, ವೆಂಕನಗೌಡ ಮಾಲಿಪಾಟೀಲ, ಸಿದ್ದಲಿಂಗಯ್ಯ ಮುಂಡರಗಿಮಠ, ಭೂಮರೆಡ್ಡಿ ಮೂಲಿಮನಿ ಇವರನ್ನು ಸನ್ಮಾನಿಸಲಾಯಿತು. ಚಂದ್ರಶೇಖರ ಗದ್ದಿ ಪ್ರಾರ್ಥಿಸಿದರು. ಭುವನೇಶ್ವರಿ ಕುರುಡಗಿ ಸ್ವಾಗತಿಸಿದರು. ಎಂ.ಆರ್. ಡೊಳ್ಳಿನ, ಮಂಜುಳಾ ಮಕಾಳೆ ನಿರೂಪಿಸಿದರು. ಸೌಮ್ಯವಾಲಿ ವಂದಿಸಿದರು.

## ಹಾಸನಾಂಬೆ ದರ್ಶನ ಪಡೆದ ಸಿಎಂ ಸಿದ್ದರಾಮಯ್ಯ

# ದೇವರನ್ನು ನಂಬುತ್ತೇನೆ, ಮೌಢ್ಯವನ್ನಲ್ಲ



**■ ವಿಜಯಸಾಕ್ಷಿ ಸುದ್ದಿ, ಹಾಸನ**

ಮೌಢ್ಯ ನಂಬಲ್ಲ. ಆದರೆ, ದೇವರನ್ನು ನಂಬುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಹಾಸನಾಂಬೆ ದರ್ಶನ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೌಢ್ಯ ನಿನ್ನೆ, ಮೊನ್ನೆಯದಲ್ಲ. ಮೌಢ್ಯ ಎಂದರೆ ನಂಬಿಕೆಯಲ್ಲಿ ಅಪನಂಬಿಕೆ. ಮೌಢ್ಯವನ್ನು ಹಿಂದಿನಿಂದ ಆಚರಣೆ ಮಾಡಿಕೊಂಡು ಬಂದಿದ್ದೇವೆ. ಅವುಗಳನ್ನು ನಾನು ನಂಬುವುದಿಲ್ಲ. ಆದರೆ, ದೇವರಲ್ಲಿ ನಂಬಿಕೆ ಇದೆ ಎಂದರು. ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದ ರೂ.37,700 ಕೋಟಿ ಬೆಳೆ ನಷ್ಟ ಸಂಭವಿಸಿದೆ. ಎನ್ ಡಿಆರ್ ಎಫ್- ಎಸ್ ಡಿಆರ್ ಎಫ್ ನಿಯಮದಂತೆ ರೂ. 17, 900 ಕೋಟಿ ಪರಿಹಾರ ಬಿಡುಗಡೆಗೆ ಕೇಂದ್ರಕ್ಕೆ ಪ್ರಸ್ತಾವ ನೀಡಿರುವುದಾಗಿ ತಿಳಿಸಿದ ಮುಖ್ಯಮಂತ್ರಿ, ಕೇಂದ್ರ ಸರ್ಕಾರ ಕೂಡಲೇ ರಾಜ್ಯಕ್ಕೆ ಅಗತ್ಯ ಬರ ಪರಿಹಾರದ ಹಣ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

# ಭಾರತದಲ್ಲಿ ಹೆಚ್ಚಿದ ಸೈಬರ್ ದಾಳಿ



■ವಿಜಯಸಾಕ್ಷಿ ಸುದ್ದಿ, ನವದೆಹಲಿ

ಸೈಬರ್–ಭದ್ರತಾ ವರದಿಯ ಪ್ರಕಾರ, ವಿಶ್ವದ ಎಲ್ಲಾ ಸೈಬರ್ ದಾಳಿಗಳಲ್ಲಿ ಭಾರತವು ಶೇ 13.7ರಷ್ಟು ಭಾಗ ಗುರಿಯಾಗಿದೆ. ಸಿಂಗಾಪುರ ಮೂಲದ ಸೈಬರ್ ಸೆಕ್ಯುರಿಟಿ ಗುಪ್ತಚರ ಸಂಸ್ಥೆ ಸೈಫ್ರಿಮಾದ ಇಂಡಿಯಾ ಥ್ರೆಟ್ ಲ್ಯಾಂಡ್‌ಸ್ಕೇಪ್ ರಿಪೋರ್ಟ್–2023ರ ಪ್ರಕಾರ, 2021ರ ಇದೇ ಅವಧಿಗೆ ಹೋಲಿಸಿದರೆ 2022ರ ದ್ವಿತೀಯಾರ್ಧದಲ್ಲಿ ಸರ್ಕಾರಿ ಸಂಸ್ಥೆಗಳ ಮೇಲಿನ ದಾಳಿಗಳ ಸಂಖ್ಯೆ ಶೇ 95ರಷ್ಟು ಹೆಚ್ಚಾಗಿದೆ.

ಶಿಕ್ಷಣ, ಸಂಶೋಧನೆ, ಸರ್ಕಾರಿ ಮತ್ತು ಮಿಲಿಟರಿ ಕ್ಷೇತ್ರಗಳು ನಂತರ ಆರೋಗ್ಯ ರಕ್ಷಣೆಯನ್ನು ಹ್ಯಾಕರ್‌ಗಳು ಹೆಚ್ಚು ಗುರಿಯಾಗಿಸಿಕೊಂಡಿದ್ದಾರೆ. 2022ರಲ್ಲಿ ಭಾರತದಲ್ಲಿ ಒಂದು ಸಂಸ್ಥೆಯ ಮೇಲೆ ವಾರಕ್ಕೆ ಸರಾಸರಿ 1,866 ಬಾರಿ ದಾಳಿ ನಡೆದಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. 2021ಕ್ಕೆ ಹೋಲಿಸಿದರೆ 2022ರಲ್ಲಿ ಭಾರತದಲ್ಲಿ ಸರ್ಕಾರಿ ಪ್ರಾಯೋಜಿತ ಸೈಬರ್ ದಾಳಿಗಳ ಸಂಖ್ಯೆ ಶೇ 100ಕ್ಕಿಂತ ಹೆಚ್ಚಾಗಿದೆ.

2021ರಲ್ಲಿ ಶೇ 78 ಭಾರತೀಯ ಸಂಸ್ಥೆಗಳು ರಾನ್ಸಮ್‌ವೇರ್ ದಾಳಿಯನ್ನು ಅನುಭವಿಸಿವೆ.

ಭೌಗೋಳಿಕ–ರಾಜಕೀಯ ಅಂಶಗಳು ಮತ್ತು ಭಾರತದ ವಿರುದ್ಧ ಒಗ್ಗೂಡುವ ಬೆದರಿಕೆಗಳ ಬಗ್ಗೆ ವರದಿ ಎಚ್ಚರಿಸಿದೆ. ಭಾರತದ ಹೆಚ್ಚುತ್ತಿರುವ ಪ್ರಾಮುಖ್ಯತೆ ಮತ್ತು ಕಡಿಮೆ ಸೈಬರ್‌ಸೆಕ್ ಪ್ರಬುದ್ಧತೆಯು ಹ್ಯಾಕರ್‌ಗಳು ನಿರ್ಣಾಯಕ ಸ್ವತ್ತುಗಳು, ಸರ್ಕಾರಿ ಸಂಸ್ಥೆಗಳನ್ನು ಉಲ್ಲಂಘಿಸುವ ಮತ್ತು ಭಾರತದ ಕಾರ್ಯತಂತ್ರದ ಹಿತಾಸಕ್ತಿಗಳಿಗೆ ಹಾನಿ ಮಾಡುವ ಉದ್ದೇಶದಿಂದ ಪ್ರಮುಖ ಪಾತ್ರ ವಹಿಸಿದೆ ಎಂದು ಅದು ಹೇಳಿದೆ.

### ಬರಗಾಲದಲ್ಲೂ ಬಂಪರ್ ಬೆಳೆ ಬೆಳೆದ ಚಿಕ್ಕನರಗುಂದ ಗ್ರಾಮದ ಪ್ರಗತಿಪರ ರೈತ

# ಕೈಲಾಗದು ಎಂದು ಕೈಕಟ್ಟಿ ಕುಳಿತರೆ...

■ವಿಜಯಸಾಕ್ಷಿ ಸುದ್ದಿ, ನರಗುಂದ

ಮುಂಗಾರು ಮತ್ತು ಹಿಂಗಾರು ಮಳೆಗಳನ್ನು ನಂಬಿದ ರೈತರಿಗೆ ಮಳೆ ಕೈಕೊಟ್ಟಿದ್ದರಿಂದ ಬೆಳೆಯೆಲ್ಲ ನಾಶವಾಗಿದೆ. ಬಿತ್ತಿದ ಬೀಜ ಮಣ್ಣಲ್ಲಿ ಮಣ್ಣಾಗಿದೆ. ಇಂಥಹ ಬರಗಾಲದಲ್ಲಿ ತಾಲೂಕಿನ ಚಿಕ್ಕನರಗುಂದ ಗ್ರಾಮದ ರೈತರೊಬ್ಬರು ತಾವು ನಿರ್ಮಿಸಿದ ಕೆರೆಯ ನೀರಿನಿಂದ ಉತ್ತಮ ಬೆಳೆಯನ್ನು ತೆಗೆದದ್ದು ಮೆಚ್ಚುವಂತಹ ಕಾಯಕವಾಗಿದೆ.

ಚಿಕ್ಕನರಗುಂದ ಗ್ರಾಮದ ರೈತ ಶಿವರಡ್ಡಿ ತಿಮ್ಮರಡ್ಡಿ ಅವರು 50 ಎಕರೆ ಭೂಮಿಯನ್ನು ಹೊಂದಿದ್ದಾರೆ. 2016–17ನೇ ಸಾಲಿನಲ್ಲಿ ರಾಜ್ಯ ಸರಕಾರದ ಕೃಷಿಹೊಂಡ ಯೋಜನೆ ಅಡಿಯಲ್ಲಿ 1 ಲಕ್ಷ ರೂಗಳ ಸಹಾಯಧನ ಪಡೆದು, ಜೊತೆಗೆ ತಮ್ಮ ಸ್ವಂತದ 11 ಲಕ್ಷ ರೂಗಳನ್ನು ಖರ್ಚು ಮಾಡಿ, 2 ಎಕರೆ ಭೂಮಿಯಲ್ಲಿ ಬೃಹತ್ ಕೆರೆಯನ್ನು ನಿರ್ಮಿಸಿದ್ದಾರೆ. ಮಲಪ್ರಭಾ ನದಿಯಿಂದ ಕಾಲುವೆಗೆ ನೀರು ಬಿಟ್ಟಾಗ ಅದರ ಮೂಲಕ ಕೆರೆಯನ್ನು ತುಂಬಿಸಿಕೊಂಡು ಕೃಷಿಗಾಗಿ ಬಳಸಿಕೊಳ್ಳುತ್ತಾರೆ. ಈ ಕೆರೆಯ ನೀರನ್ನು ಬಳಸಿಕೊಂಡ ರೈತ ಶಿವರಡ್ಡಿ ಅವರು 30 ಎಕರೆ ಕಡಲೆ, 8 ಎಕರೆ ಈರುಳ್ಳಿ, 4 ಎಕರೆ ಬಿಳಿಜೋಳ, 5 ಎಕರೆ ಗೋದಿ ಬಿತ್ತನೆ ಮಾಡಿದ್ದಾರೆ. ಕೆರೆಯ ನೀರನ್ನು ಬಳಸಿಕೊಂಡು ಬೆಳೆದಿರುವ ಈರುಳ್ಳಿ ಉತ್ತಮವಾಗಿ ಬೆಳೆದು ನಿಂತಿದೆ. ಇಂತಹ ಬರಗಾಲದಲ್ಲಿ ಎಲ್ಲ ಬೆಳೆಗಳಿಗೂ ಈ ಕೆರೆಯ ನೀರೇ ಆಸರೆಯಾಗಿದೆ.



ಬರಗಾಲವೆಂದು ಕೈಚೆಲ್ಲಿ ಕುಳಿತುಕೊಳ್ಳದೇ, ಸಂಗ್ರಹಿಸಿಟ್ಟ ನೀರನ್ನು ತಾವು ಬಿತ್ತನೆ ಮಾಡಿದ ಹಾಗೂ ಬೆಳೆದು ನಿಂತಿರುವ ಬೆಳೆಗೆ ಹಾಯಿಸುತ್ತಾ ಆ ಎಲ್ಲ ಬೆಳೆಗಳನ್ನು ರಕ್ಷಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಇದರ ಪರಿಣಾಮ ಮುಂಗಾರು ಹೆಸರು ಬೆಳೆಗೆ ಕೆರೆ ನೀರನ್ನು ಸ್ಪಿಂಕ್ಲರ್ ಮೂಲಕ ಹಾಯಿಸಿ 40 ಎಕರೆ ಹೆಸರು ಬೆಳೆಯಿಂದ 160 ಕ್ವಿಂಟಾಲ್ ಬೆಳೆ ತೆಗೆದಿದ್ದಾರೆ. 8 ಎಕರೆ ಈರುಳ್ಳಿ ಬೆಳೆ ತುಂಬಾ ಚೆನ್ನಾಗಿ ಬೆಳೆದಿದೆ. ಈರುಳ್ಳಿಗೆ ಮಾರುಕಟ್ಟೆಯಲ್ಲಿ ಒಳ್ಳೆಯ ದರ ಇರುವುದರಿಂದ ಸದ್ಯ ಈರುಳ್ಳಿ ರೈತನ ಕೈ ಹಿಡಿಯುವುದರಲ್ಲಿ ಸಂದೇಹವಿಲ್ಲ.

ದುಡಿಯುವ ಮನಸ್ಸೊಂದು ಇದ್ದರೆ ನೀರಿನ ಸದ್ಬಳಕೆ ಮಾಡಿಕೊಂಡು ಬರಗಾಲದಲ್ಲೂ ಉತ್ತಮ ಬೆಳೆ ಬೆಳೆಯಬಹುದು. 50 ಎಕರೆ ಜಮೀನು ಸುತ್ತಲಿನ ಬದುವಿನಲ್ಲಿ 400ಕ್ಕೂ ಹೆಚ್ಚು ಮಹಾಗನಿ ಗಿಡಗಳನ್ನು ಬೆಳೆಸಲಾಗುತ್ತಿದೆ. 2 ಎಕರೆ ವಿಸ್ತಾರವುಳ್ಳ ಕೆರೆಯಲ್ಲಿ ಮುಂಬರುವ ವರ್ಷದಿಂದ ಮೀನುಸಾಕಾಣಿಕೆ ಮಾಡುವ ಉದ್ದೇಶವನ್ನು ಹೊಂದಲಾಗಿದೆ ಎಂದು ರೈತ ಶಿವರಡ್ಡಿ ತಿಮ್ಮರಡ್ಡಿ ತಿಳಿಸುತ್ತಾರೆ.

> ಪ್ರಕೃತಿ ಮಹಿಮೆ ಯಾರಿಗೂ ತಿಳಿಯದಾಗಿದೆ. ಅತಿವೃಷ್ಟಿ, ಅನಾವೃಷ್ಟಿ ಉಂಟಾದಾಗ ರೈತರು ಭಯಬೀತರಾಗದೇ ಜಾಣ್ಮೆಯಿಂದ ಅದನ್ನು ಎದುರಿಸಿ ನಿಂತು ಉತ್ತಮ ಕೃಷಿ ಮಾಡಿ ತೋರಿಸಬೇಕಾಗಿದೆ. ಕೃಷಿ ಹೊಂಡದ ನೀರನ್ನು ಸದ್ಬಳಕೆ ಮಾಡಿಕೊಂಡು ಬರಗಾಲದಲ್ಲಿಯೂ ಕೃಷಿ ಮಾಡುವುದು ಹೆಮ್ಮೆಯ ವಿಷಯ. ಜಗತ್ತಿಗೆ ಅನ್ನ ನೀಡುವ ರೈತ ಎಂದೂ ಕೈಕಟ್ಟಿ ಕುಳಿತುಕೊಳ್ಳಲಾರ. ತನ್ನ ಕಾಯಕವನ್ನು ನಿರಂತರ ಮಾಡುತ್ತಾನೆ ಎನ್ನುವುದಕ್ಕೆ ಶಿವರಡ್ಡಿ ತಿಮ್ಮರಡ್ಡಿ ಅವರಂತಹ ರೈತರು ನಿದರ್ಶನವಾಗುತ್ತಾರೆ.
>
> **– ವಿಜಯ ಕುಲಕರ್ಣಿ.**
> ಕಳಸಾ ಬಂಡೂರಿ ಮಲಪ್ರಭಾ ಜೋಡಣಾ ಹೋರಾಟ ಸಮಿತಿ, ನರಗುಂದ.



### ವಿಶ್ವ ಹಿಂದೂಪರಿಷತ್, ಭಜರಂಗದಳ ಕಾರ್ಯಕರ್ತರ ಸಭೆಯಲ್ಲಿ ರಾಘವೇಂದ್ರ ಹಬೀಬ ಅಭಿಮತ

# ಭಾರತ ಸುಸಂಸ್ಕೃತ, ಸಂಪದ್ಭರಿತ ಹಿಂದೂ ದೇಶ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಧರ್ಮೋ ರಕ್ಷತಿ ರಕ್ಷಿತಃ ಎಂಬಂತೆ ವಿಶ್ವಶ್ರೇಷ್ಠವಾದ ಹಿಂದೂ ಧರ್ಮದಲ್ಲಿ ಜನಿಸಿದ ಪ್ರತಿಯೊಬ್ಬರೂ ಹಿಂದೂ ಧರ್ಮದ ಸಂಘಟನೆ, ಧರ್ಮ ಸಂರಕ್ಷಣೆಗೆ ಬದ್ಧರಾಗಿರಬೇಕು ಎಂದು ಗದಗ ಜಿಲ್ಲಾ ಕಾರ್ಯದರ್ಶಿ ರಾಘವೇಂದ್ರ ಹಬೀಬ ಹೇಳಿದರು.

ಅವರು ಇತ್ತೀಚೆಗೆ ಪಟ್ಟಣದಲ್ಲಿ ನಡೆದ ವಿಶ್ವಹಿಂದೂಪರಿಷತ್, ಭಜರಂಗದಳ ಕಾರ್ಯಕರ್ತರ ಸಭೆ ಮತ್ತು ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿ, ಭಾರತ ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ಸುಸಂಸ್ಕೃತ, ಮೌಲ್ಯಾಧಾರಿತ, ಸಂಪದ್ಭರಿತ ಹಿಂದೂ ದೇಶವಾಗಿದೆ. ಈ ಪುಣ್ಯ ಭೂಮಿಯಲ್ಲಿ ಜನಿಸಿದ ಪ್ರತಿಯೊಬ್ಬ ಹಿಂದೂವು ಧರ್ಮದ ಅಭಿಮಾನಿಯಾಗಿರಬೇಕು. ಧರ್ಮ, ದೇಶ ರಕ್ಷಣೆಗಾಗಿ ಅನೇಕ ಮಹನೀಯರು ತ್ಯಾಗ ಬಲಿದಾನಗೈದ ದೇಶ ನಮ್ಮದಾಗಿದೆ ಎಂದರು. ಪಂಚಮಸಾಲಿ ಸಮಾಜದ ತಾಲೂಕಾಧ್ಯಕ್ಷ ಮಂಜುನಾಥ ಮಾಗಡಿ ಮಾತನಾಡಿ, ಹಿಂದೂ ಧರ್ಮದ ಸಂಸ್ಕೃತಿ, ಕ್ಷಾತ್ರ ಪರಂಪರೆ ಉಳಿಸಿ–ಬೆಳೆಸುವ ಸಂಕಲ್ಪದಿಂದ ಸಂಘಟನೆಯ ಕಾರ್ಯಕರ್ತರು ಕೆಲಸ ಮಾಡಬೇಕಾಗುತ್ತದೆ. ದ್ವೇಷದ ಭಾವನೆ ತುಂಬಿಕೊಂಡಿರುವ ಕೆಲವು ಪಟ್ಟಭದ್ರ ಶಕ್ತಿಗಳು ಸಂಘಟನೆಯ ಬಗ್ಗೆ ಕೀಳಾಗಿ ಮಾತನಾಡುತ್ತಿದ್ದಾರೆ. ಎಲ್ಲವನ್ನೂ ಬದಿಗೊತ್ತಿ ಹಿಂದೂ ಧರ್ಮ, ನೆಲ, ಜಲ ಮತ್ತು ಗೋಮಾತೆಯ ಬಗ್ಗೆ ಗೌರವ ಭಾವನೆ ಹೊಂದೋಣ ಎಂದರು.

ಈ ವೇಳೆ ತಾಲೂಕಾ ಸತ್ಸಂಗ ಪ್ರಮುಖ ಶಂಕರ ದಹಿಂಡೆ, ಹಿಂದೂ ಮಹಾಸಭಾ ವೇದಿಕೆಯ ತಾಲೂಕಾಧ್ಯಕ್ಷ ಫಕ್ಕಿರೇಶ ಅಣ್ಣಿಗೇರಿ, ರಾಜು ಅರಳಿ, ಮುರಘೇಂದ್ರಸ್ವಾಮಿ ಹಿರೇಮಠ, ಶಿವನಗೌಡ ಅಡರಕಟ್ಟಿ, ದ್ಯಾಮಣ್ಣ ಕಮತದ, ನಾಗರಾಜ ಚಿಂಚಲಿ, ಈಶಣ್ಣ ಕುಂಬಾರ ಸೇರಿ ಹಲವರಿದ್ದರು. ಚಂದ್ರು ಮಾಗಡಿ ನಿರ್ವಹಿಸಿದರು.

> ಈ ವೇಳೆ ವಿಶ್ವ ಹಿಂದೂ ಪರಿಷತ್, ಭಜರಂಗದಳ ಲಕ್ಷ್ಮೇಶ್ವರ ತಾಲೂಕು ಘಟಕದ ಪದಾಧಿಕಾರಿಗಳ ಆಯ್ಕೆ ನಡೆಯಿತು. ತಾಲೂಕಾ ಸಂಯೋಜಕರಾಗಿ ಮಾಂತೇಶ ಗೋಡಿ, ಸಹ ಸಂಯೋಜಕರಾಗಿ ನವೀನ ಕುಂಬಾರ, ಮಹೇಶ ಒಟಿಟಮುರಿ, ಸುರಕ್ಷಾ ಪ್ರಮುಖರಾಗಿ ಮಾಂತೇಶ ಅಣ್ಣಿಗೇರಿ, ಮಹಾಂತೇಶ ಕುಂಬಾರ, ಗೋಸೇವಾ ಪ್ರಮುಖರಾಗಿ ಮಂಜುನಾಥ ಮುಳಗುಂದ, ಮಂಜುನಾಥ ನಾವಿ, ಗೋರಕ್ಷಾ ಪ್ರಮುಖರಾಗಿ ಕಿರಣ ಚಿಲ್ಲೂರ, ಹನಮಂತಪ್ಪ ರಾಮಗಿರಿ, ಮಂಜುನಾಥ ತಿಮ್ಮಣ್ಣವರ, ಸತ್ಸಂಗ ಪ್ರಮುಖ–ಪ್ರಶಾಂತ ಆಚಾರಿ, ಸಂಘಟನಾ ಕಾರ್ಯಕರ್ತರಾಗಿ ಶಂಕರ ಕುಂಬಾರ, ಸಂತೋಷ ಗೋಡಿ, ಮಂಜು ಕುಂಬಾರ, ಸಚಿನ್ ಕುಂಬಾರ, ಪ್ರವೀಣ ಕುಂಬಾರ ಆಯ್ಕೆಯಾದರು.

# ಚಾಲಕನ ನಿಯಂತ್ರಣ ತಪ್ಪಿ ವಿಸಿ ನಾಲೆಗೆ ಬಿದ್ದ ಕಾರು, ಐವರು ಜಲಸಮಾಧಿ

■ವಿಜಯಸಾಕ್ಷಿ ಸುದ್ದಿ, ಮಂಡ್ಯ

ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ಬನಘಟ್ಟದ ಬಳಿ ಮಂಗಳವಾರ ಸಂಜೆ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ವಿಸಿ ನಾಲೆಗೆ ಬಿದ್ದಿದ್ದು, ಭೀಕರ ಅಪಘಾತದಲ್ಲಿ ಕಾರಿನಲ್ಲಿದ್ದ ಐವರೂ ಜಲಸಮಾಧಿಯಾಗಿದ್ದಾರೆ.

ಮೈಸೂರು ಕಡೆಯಿಂದ ಬರುತ್ತಿದ್ದ ಮಾರುತಿ ಸ್ವಿಫ್ಟ್ ಕಾರು ಚಾಲಕನ ನಿಯಂತ್ರಣ ತಪ್ಪಿ ನೇರವಾಗಿ ವಿಸಿ ನಾಲೆಗೆ ಬಿದ್ದಿದೆ. ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಪೊಲೀಸರು ಕಾರನ್ನು ಹೊರ ತೆಗೆದಿದ್ದು, ಕಾರಿನಲ್ಲಿ ಐವರ ಮೃತದೇಹಗಳು ಪತ್ತೆಯಾಗಿವೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ರವಾನಿಸಲಾಗಿದೆ.

ಪ್ರತ್ಯಕ್ಷದರ್ಶಿಗಳ ಪ್ರಕಾರ, ಕಾರು ಚಾಲಕ ಎದುರಿಗೆ ಬರುತ್ತಿದ್ದ ಬೈಕ್ ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಕಾರು ನಾಲೆಗೆ ಉರುಳಿ ಬಿದ್ದಿದೆ.

ಸ್ಥಳಕ್ಕೆ ಮಂಡ್ಯ ಎಸ್ ಪಿ ಯತೀಶ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸೋಮವಾರವಷ್ಟೇ ಕೆಆರ್ ಎಸ್ ಡ್ಯಾಂನಿಂದ ವಿಸಿ ನಾಲೆಗೆ ನೀರು ಬಿಡಲಾಗಿತ್ತು ಎಂದು ತಿಳಿದು ಬಂದಿದೆ.



# ಸಮಯಕ್ಕೆ ಸರಿಯಾಗಿ ಪರಿಹಾರ ಒದಗಿಸುವುದು ಕೇಂದ್ರ ಸರ್ಕಾರದ ಕರ್ತವ್ಯ: ಸಿಎಂ ಸಿದ್ದರಾಮಯ್ಯ

■ವಿಜಯಸಾಕ್ಷಿ ಸುದ್ದಿ, ಹಾಸನ

ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ ಮಾಡದ ಕೇಂದ್ರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಾಜ್ಯದ ಪ್ರಸ್ತಾವನೆ ಪರಿಗಣಿಸಿ ಅನುದಾನ ಬಿಡುಗಡೆ ಮಾಡಬೇಕಾಗಿರುವುದು ಕೇಂದ್ರ ಸರ್ಕಾರದ ಕರ್ತವ್ಯ ಎಂದು ಬುಧವಾರ ಹೇಳಿದ್ದಾರೆ.

ಹಾಸನಾಂಬ ದೇವಸ್ಥಾನಕ್ಕೆ ಭೇಟಿ ನೀಡುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ, ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸಮನ್ವಯದಿಂದ ಕೆಲಸ ಮಾಡಬೇಕು. ಕೇಂದ್ರ ಸಹ ರಾಜ್ಯಗಳಿಗೆ ಸಹಕಾರ ನೀಡಬೇಕು. ರಾಜ್ಯಗಳು ಜನರ ತೆರಿಗೆ ಹಣವನ್ನು ಕೇಂದ್ರಕ್ಕೆ ಕಟ್ಟಿರುತ್ತವೆ. ಸಮಯಕ್ಕೆ ಸರಿಯಾಗಿ ಪರಿಹಾರ ಒದಗಿಸುವುದು ಕೇಂದ್ರದ ಕರ್ತವ್ಯ ಎಂದರು.



ಕೇಂದ್ರ ಸರ್ಕಾರ, ಮಾರ್ಗಸೂಚಿಗಳ ಪ್ರಕಾರ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ(ಎನ್‌ಡಿಆರ್‌ಎಫ್) ಅಡಿಯಲ್ಲಿ ರಾಜ್ಯಗಳಿಗೆ ಇನ್‌ಪುಟ್ ಸಬ್ಸಿಡಿ ಬಿಡುಗಡೆ ಮಾಡಬೇಕು. ರಾಜ್ಯ ಸರ್ಕಾರ 17901 ಕೋಟಿ ರೂ.ಗಳ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಕಳುಹಿಸಿದೆ.

ಕೇಂದ್ರ ತಂಡ ಭೇಟಿ ನೀಡಿ ಸಮೀಕ್ಷೆ ನಡೆಸಿದ್ದರೂ ಕೇಂದ್ರ ಇನ್ನೂ ಯಾವುದೇ ಪರಿಹಾರ ಬಿಡುಗಡೆ ಮಾಡಿಲ್ಲ ಎಂದು ಕಿಡಿ ಕಾರಿದರು.

ಬರ ಪರಿಸ್ಥಿತಿ ನಿಭಾಯಿಸುವಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿ ಪ್ರಶ್ನಿಸಿದ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿಎಂ, ಜೆಡಿಎಸ್ ಎನ್‌ಡಿಎ ಭಾಗವಾಗಿರುವುದರಿಂದ ಎಚ್‌ಡಿ ಕುಮಾರಸ್ವಾಮಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬಹುದು ಎಂದರು.

ನಂತರ ನಡೆದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿಎಂ, ಗೃಹಜ್ಯೋತಿ, ಭಾಗ್ಯಲಕ್ಷ್ಮಿ ಸೇರಿದಂತೆ ಹೊಸ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಶೇ.100 ರಷ್ಟು ಅನುಷ್ಠಾನಗೊಳಿಸಲು ಆಯಾ ಜಿಲ್ಲೆಯ ಜಿಲ್ಲಾಧಿಕಾರಿ, ಜಿಪಂ, ಸಿಇಒ, ತಹಶೀಲ್ದಾರರು, ಕಾರ್ಯನಿರ್ವಾಹಕ ಅಧಿಕಾರಿಗಳು ಸೇರಿದಂತೆ ಹಿರಿಯ ಅಧಿಕಾರಿಗಳು ಕ್ರಮಕೈಗೊಳ್ಳಬೇಕು ಎಂದರು.

# ನವೆಂಬರ್ ಅಂತ್ಯದೊಳಗೆ 'ಸ್ವನಿಧಿ' ಗುರಿ ಸಾಧನೆ

■ವಿಜಯಸಾಕ್ಷಿ ಸುದ್ದಿ, ಮಂಡ್ಯ

ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ಅನುಷ್ಠಾನದಲ್ಲಿ ದೇಶದಲ್ಲೇ ಕರ್ನಾಟಕ 5ನೇ ಸ್ಥಾನದಲ್ಲಿದ್ದು, ಡಿಸೆಂಬರ್ ಅಂತ್ಯದೊಳಗೆ ಮೊದಲ ಸ್ಥಾನಕ್ಕೆ ಪ್ರಯತ್ನ ನಡೆಸಲಾಗುವುದು ಎಂದು ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕ ಕೆ.ರಾಮದಾಸ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವನಿಧಿ ಯೋಜನೆಯಡಿ ರಾಜ್ಯದ 311 ನಗರ, ಪಟ್ಟಣ ಪ್ರದೇಶಗಳ ಸ್ಥಳೀಯ ಸಂಸ್ಥೆಗಳಿಗೆ ಆದೇಶ ಹೊರಡಿಸಿದೆ. ರಾಜ್ಯದಲ್ಲಿ 3.31 ಲಕ್ಷ ಗುರಿ ಹೊಂದಲಾಗಿದ್ದು, 3.08 ಲಕ್ಷ ಮಂದಿಗೆ ನೀಡಲಾಗಿದೆ. ನವೆಂಬರ್ ಅಂತ್ಯದೊಳಗೆ ಗುರಿ ಸಾಧನೆ ಮಾಡಲಾಗುವುದು. ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದೇನೆ. ಈಗಾಗಲೇ 26 ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿದ್ದೇನೆ. ಯೋಜನೆಗೆ ವ್ಯಾಪಾರಸ್ಥರಲ್ಲದೆ, ಅಸಂಘಟಿತ ಕಾರ್ಮಿಕರನ್ನು ತರುವ ಉದ್ದೇಶ ಹೊಂದಲಾಗಿದೆ ಎಂದು ಹೇಳಿದರು.

ರಾಜ್ಯದ 32 ಜಿಲ್ಲೆಗಳಲ್ಲೂ ಈ ಯೋಜನೆ ಜಾರಿಯಲ್ಲಿದ್ದು, ದೇಶದ 4.86 ಜನರಿಗೆ 9 ಸಾವಿರ ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ.

ಜಿಲ್ಲೆಯಲ್ಲಿ 4181 ಮಂದಿ ಅರ್ಜಿ ಸಲ್ಲಿಸಿದ್ದು, ಈ ಪೈಕಿ 4065 ಅರ್ಜಿಗಳನ್ನು ಶಿಫಾರಸ್ಸು ಮಾಡಲಾಗಿದೆ. ಇದರಲ್ಲಿ 3795 ಮಂದಿಗೆ ಸಾಲ ನೀಡುವ ಮೂಲಕ ಶೇ 97ರಷ್ಟು ಸಾಧನೆ ಮಡಲಾಗಿದೆ ಎಂದು ವಿವರಿಸಿದರು.

### 'ವಿಶ್ವ ಸೊಳ್ಳೆ ದಿನಾಚರಣೆ' ಪ್ರಯುಕ್ತ ವಿದ್ಯಾರ್ಥಿಗಳಿಗೆ ಸೊಳ್ಳೆ ನಿಯಂತ್ರಣ ವಿಧಾನಗಳ ಮಾದರಿ ಪ್ರದರ್ಶನ

# ರೋಗ ನಿಯಂತ್ರಣಕ್ಕೆ ಸಮುದಾಯದ ಸಹಕಾರ ಅಗತ್ಯ



■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಾರ್ಯಾಲಯ, ತಾಲೂಕಾ ಆರೋಗ್ಯ ಅಧಿಕಾರಿಗಳು ಮುಂಡರಗಿ, ಸಾರ್ವಜನಿಕ ಶಿಕ್ಷಣ ಇಲಾಖೆ ಮುಂಡರಗಿ ಇವರುಗಳ ಸಂಯುಕ್ತಾಶ್ರಯದಲ್ಲಿ ಸೋಮವಾರ ಮುಂಡರಗಿಯ ಎಮ್.ಸಿ.ಎಸ್ ಶಾಲೆಯಲ್ಲಿ ತಾಲೂಕು ಮಟ್ಟದ 'ವಿಶ್ವ ಸೊಳ್ಳೆ ದಿನಾಚಾರಣೆ' ಪ್ರಯುಕ್ತ ಶಾಲಾ ಮಕ್ಕಳಿಗೆ ಸೊಳ್ಳೆ ನಿಯಂತ್ರಣ ವಿಧಾನಗಳ ಮಾದರಿ ಪ್ರದರ್ಶನ, ಸ್ಪರ್ಧಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮುಂಡರಗಿ ತಾಲೂಕಾ ಆರೋಗ್ಯಾಧಿಕಾರಿ ಡಾ. ರಾಜೇಶ ಟಿ.ಎಸ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಲೇರಿಯಾ ರೋಗವು ಅನಾಫಿಲಿಸ್ ಜಾತಿಯ ಹೆಣ್ಣು ಸೊಳ್ಳೆಗಳಿಂದ ಒಬ್ಬರಿಂದೊಬ್ಬರಿಗೆ ಹರಡುತ್ತದೆ. ಸೊಳ್ಳೆಗಳಿಂದ ಬರುವ ರೋಗಗಳನ್ನು ತಡೆಯಲು ಮುನ್ನೆಚ್ಚರಿಕೆ ಕ್ರಮವಾಗಿ ಪ್ರತಿಯೊಬ್ಬರೂ ತಮ್ಮ ಮನೆಯ ಸುತ್ತಮುತ್ತ ನೀರು ನಿಲ್ಲದ ಹಾಗೆ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಮಲಗುವಾಗ ಸೊಳ್ಳೆ ಪರದೆಗಳನ್ನು ಬಳಸಬೇಕು. ಸೊಳ್ಳೆಗಳಿಂದ ಹರಡುವ ರೋಗಗಳ ಬಗ್ಗೆ ಹಾಗೂ ನಿಯಂತ್ರಣ ಕುರಿತು ನಿಮ್ಮ ಮನೆಯ ಸುತ್ತಮುತ್ತಲಿರುವ ಜನರಿಗೆ ಅರಿವು ಮೂಡಿಸಬೇಕೆಂದು ತಿಳಿಸಿದರು.

ಮುಂಡರಗಿ ತಾಲೂಕಾ ಆರೋಗ್ಯ ಶಿಕ್ಷಣಾಧಿಕಾರಿ ಎಮ್.ಎಸ್. ಸಜ್ಜನರ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸೊಳ್ಳೆಗಳು ಕಚ್ಚುವದರಿಂದ ಮಲೇರಿಯಾ, ಡೆಂಗೀ, ಚಿಕನಗುನ್ಯಾ, ಮೆದಳುಜ್ವರ, ಆನೆಕಾಲು ರೋಗ, ಜೀಕಾ ರೋಗಗಳು ಬರುತ್ತವೆ. ಅದಕ್ಕಾಗಿ ಸೊಳ್ಳೆಗಳ ನಿಯಂತ್ರಣ ಅತ್ಯವಶ್ಯವಾಗಿದೆ.

ರೋಗಗಳು ಹರಡದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಆರೋಗ್ಯ ಇಲಾಖೆ ಜೊತೆ–ಗೆ ಸಮುದಾಯದ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು.

ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಹನಮರಡ್ಡಿ ಇಟಗಿ ಮಾತನಾಡಿ, ಸೊಳ್ಳೆಗಳ ನಿಯಂತ್ರಣ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಅದಕ್ಕಾಗಿ ಆರೋಗ್ಯ ಇಲಾಖೆ ಜೊತೆಗೆ ಎಲ್ಲಾ ಸಮುದಾಯದವರು ಹಾಗೂ ಎಲ್ಲಾ ಇಲಾಖೆಯವರು ಸೇರಿಕೊಂಡು ಸೊಳ್ಳೆ ನಿಯಂತ್ರಣ ಮಾಡುವಲ್ಲಿ ಸಹಕರಿಸಬೇಕೆಂದು ತಿಳಿಸಿದರು.

ಬಿ.ಪಿ. ಮಟ್ಟಿ ಸ್ವಾಗತಿಸಿದರು. ಮುಂಡರಗಿ ಸಿಆರ್‌ಪಿ ವಿ.ಎಚ್. ಹೊಳೆಯಮ್ಮನವರ ವಂದಿಸಿದರು. ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗದವರು, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

> ಜಿಲ್ಲಾ ಎಂಟಮಾಲಿಜಿಸ್ಟ್ ಅನ್ನಪೂರ್ಣ ಶೆಟ್ಟರ ಮಾತನಾಡಿ, ಮನೆಯ ಸುತ್ತಮುತ್ತ ನೀರು ನಿಲ್ಲದ ಹಾಗೆ ನೋಡಿಕೊಳ್ಳಬೇಕು. ಮನೆಯ ಒಳಗೆ ನೀರು ತುಂಬುವ ಪಾತ್ರೆಗಳನ್ನು ವಾರಕ್ಕೊಮ್ಮೆ ಸ್ವಚ್ಛವಾಗಿ ತೊಳೆದು ಒಣಗಿಸಿ, ನೀರು ತುಂಬಿ ಮೇಲುಗಡೆ ಮುಚ್ಚಬೇಕು. ಮನೆಯ ಕಿಟಕಿಗಳಿಗೆ ಜಾಲರಿಗಳನ್ನು ಬಳಸಬೇಕು. ಮಲಗುವಾಗ ಸೊಳ್ಳೆ ಪರದೆಗಳನ್ನು ಬಳಸಬೇಕು. ಸಾಯಂಕಾಲ ಬೇವಿನ ಸೊಪ್ಪಿನ ಹೊಗೆಯನ್ನು ಹಾಕಬೇಕು ಎಂದು ಶಾಲಾ ಮಕ್ಕಳಿಗೆ ತಿಳುವಳಿಕೆ ನೀಡಿ, ಯಾವುದೇ ಜ್ವರವಿದ್ದಲ್ಲಿ ಮೊದಲು ರಕ್ತ ಪರೀಕ್ಷೆ ಮಾಡಿಸಿ ಎಂದು ಹೇಳಿದರು.

# ಮಾರನಬಸರಿಯಲ್ಲಿ ವಾಲ್ಮೀಕಿ ಜಯಂತ್ಯುತ್ಸವ



■ವಿಜಯಸಾಕ್ಷಿ ಸುದ್ದಿ, ರೋಣ

ಇಲ್ಲಿನ ಮಾರನಬಸರಿ ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಮಹರ್ಷಿ ವಾಲ್ಮೀಕಿಯವರ ಭಾವಚಿತ್ರ ಮೆರವಣಿಗೆ 101 ಕುಂಭ ಮೇಳದೊಂದಿಗೆ ಗ್ರಾಮದ ಪ್ರಮುಖ ಬಿದಿಗಳಲ್ಲಿ ಸಾಗಿ, ಮಾರುತೇಶ್ವರ ದೇವಸ್ಥಾನವನ್ನು ತಲುಪಿತು.

ವಾಲ್ಮೀಕಿ ಜಯಂತ್ಯುತ್ಸವದ ನಿಮಿತ್ತ ದೇವಸ್ಥಾನದಲ್ಲಿ 11 ದಿನಗಳಿಂದ ಪುರಾಣ ಪ್ರವಚನ ಧಾರ್ಮಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮಂಗಳವಾರ ಕೊನೆಯ ದಿನದಂದು ಸಮಾಜ ಬಾಂಧವರು ದೇವಸ್ಥಾನದ ಆವರಣದಲ್ಲಿ ಅನ್ನಸಂತರ್ಪಣೆ ಕಾರ್ಯವನ್ನು ನಡೆಸುವ ಮೂಲಕ ಮದ್ಯಾಹ್ನ ಪುರಾಣ ಪ್ರವಚನ ಕಾರ್ಯಕ್ಕೆ ಮಂಗಲ ನೆರವೇರಿಸಿ, ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಗಳನ್ನು ನೆರವೇರಿಸಿದರು.

ನಿರಂತರ 11 ದಿನಗಳ ಕಾಲ ನಡೆದ ಪುರಾಣ ಪ್ರವಚನ ಆಲಿಸಲು ಬಂದ ಭಕ್ತರಿಗೆ ನಿತ್ಯವೂ ಅನ್ನಸಂತರ್ಪಣೆ ನೆರವೇರಿಸಲಾಗಿತ್ತು. ಸಮಾಜದ ಹಿರಿಯರು, ಯುವಕರು ಸೇರಿದಂತೆ ಗ್ರಾಮಸ್ಥರು ವಾಲ್ಮೀಕಿ ಜಯಂತ್ಯುತ್ಸವದಲ್ಲಿ ಭಾಗಿಯಾಗಿದ್ದರು.

# ರಾಣಿ ಚನ್ನಮ್ಮಳ ಶೌರ್ಯ ಪ್ರೇರಣೆಯಾಗಲಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಸಂಬಾಪೂರ ರಸ್ತೆಯ ಸಮಸ್ತ ಪಂಚಮಸಾಲಿ ಸಮಾಜ ಬಾಂಧವರಿಂದ ವೀರರಾಣಿ ಕಿತ್ತೂರು ಚನ್ನಮ್ಮಾಜೀಯ 200ನೇ ವಿಜಯೋತ್ಸವ ಹಾಗೂ 245ನೇ ಜಯಂತ್ಯುತ್ಸವ ಜಯಂತಿಯನ್ನು ಆಚರಿಸಲಾಯಿತು.



ಈ ಸಂದರ್ಭದಲ್ಲಿ ಪಂಚಮಸಾಲಿ ಹಿರಿಯರಾದ ವಿಜಯಕುಮಾರ್ ಗಡ್ಡಿ ಮಾತನಾಡಿ, ಬ್ರಿಟಿಷರ ವಿರುದ್ಧ ಗೆಲುವು ಸಾಧಿಸಿದ ಪ್ರಥಮ ಮಹಿಳೆ ಕಿತ್ತೂರು ರಾಣಿ ಚನ್ನಮ್ಮ. ಅವರ ಶೌರ್ಯ, ತ್ಯಾಗಗಳು ಎಲ್ಲರಿಗೂ ಮಾದರಿಯಾಗಲಿ ಎಂದರು.

ಅನಿಲಕುಮಾರ ಪಾಟೀಲ್, ಎಫ್.ವಿ. ಮರಿಗೌಡ್ರ, ಕೆ.ಕೆ. ಮಾಳಗೌಡ್ರ, ಶೇಖಣ್ಣ ಕಣಿಗಿನಾಳ, ಈರಣ್ಣ ಕರಿಬಿಷ್ಠಿ, ಅಯ್ಯಪ್ಪ ಅಂಗಡಿ, ಸಿದ್ದಣ್ಣ ಪಲ್ಲೇದ, ಕೇಶವ ಬಡಾವಣೆಯ ಬಸವರಾಜ ರುದ್ರಾಪೂರಮಠ, ಎಂ.ಸಿ. ಹಿರೇಮಠ, ಬಿ.ಎಸ್. ಹಿರೇಮಠ, ಶರಪ್ಪ ಪಲ್ಲೇದ, ಉಮೇಶ ಮುಳ್ಳಾಳ, ಪ್ರಭು ಬಳ್ಳಾರಿ, ಈಶ್ವರಗೌಡ ಹುಡೇದಮಠದ, ಚಂದ್ರಶೇಖರ ಬಳ್ಳಾರಿ, ಶೇಖರಗೌಡ ಪಾಟೀಲ, ಸುರೇಶ ಓಲಿ, ತಮ್ಮನಗೌಡ್ರ, ಅಶೋಕ ಪಾಟೀಲ, ಪ್ರಕಾಶ ಹಡಗಲಿ, ಪ್ರಕಾಶ ಗುದ್ದೀನ, ಪ್ರಕಾಶ ಪಾಟೀಲ, ಬಸವರಾಜ ಶೆಲವಡಿ, ಈರಣ್ಣ ಜವಳಿ, ಶಿವಕುಮಾರ ಕುಷ್ಟಗಿ ಮುಂತಾದವರು ಉಪಸ್ಥಿತರಿದ್ದರು.

# ಗೋವಿನಜೋಳ ಖರೀದಿಯಲ್ಲಿ ಮೋಸದ ಶಂಕೆ: ಕ್ರಮಕ್ಕೆ ಮನವಿ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಮುಂಗಾರಿನ ಮಳೆಯ ಕೊರತೆಯ ನಡುವೆಯೂ ಅಳಿದುಳಿದ ಮೆಕ್ಕೆಜೋಳದ ಫಸಲನ್ನು ಒಕ್ಕಲಿ ಮಾಡಿದ ರೈತರು ಮಾರಾಟ ಮಾಡುತ್ತಿದ್ದಾರೆ. ಆದರೆ ರೈತರಿದ್ದಲ್ಲಿಗೆ ಬರುವ ಕೆಲ ಖರೀದಿದಾರರು ತೂಕದಲ್ಲಿ ವ್ಯತ್ಯಾಸ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ನಷ್ಟ ಉಂಟಾಗುವ ಸಾಧ್ಯತೆಯಿದ್ದು, ಇದನ್ನು ತಡೆಯುವ ನಿಟ್ಟಿನಲ್ಲಿ ಖರೀದಿದಾರರ ತೂಕದ ಯಂತ್ರ ಪರಿಶೀಲನೆ ಮಾಡಬೇಕು ಮತ್ತು ಖರೀದಿದಾರರಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಬೇಕು ಎಂದು ಭಾರತೀಯ ಕೃಷಿಕ ಸಮಾಜದ ತಾಲೂಕಾಧ್ಯಕ್ಷ ಚನ್ನಪ್ಪ ಷಣ್ಮುಖಿ ಅವರ ನೇತೃತ್ವದಲ್ಲಿ ಸೋಮವಾರ ತಹಸೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಮೆಕ್ಕೆಜೋಳದ ಇಳುವರಿ ಕುಂಠಿತವಾಗಿದ್ದು, ರೈತ ಬಿತ್ತಿ ಬೆಳೆದ ಖರ್ಚಿಗೂ ಸರಿದೂಗದಂತಾಗಿ ನಷ್ಟದಲ್ಲಿದ್ದಾರೆ. ಗೋವಿನಜೋಳದ ಮಹಸೂಲನ್ನು ಲಕ್ಷ್ಮೇಶ್ವರದ ಎಪಿಎಂಸಿಯಲ್ಲಿ ಖರೀದಿ ಮಾಡುವುದೇ ವಿರಳ. ಇದರಿಂದ ಖರೀದಿದಾರರು ನೇರವಾಗಿ ರೈತರಿದ್ದಲ್ಲಿಗೆ ತೆರಳಿ ಖರೀದಿಸುತ್ತಾರೆ. ಈ ವೇಳೆ ಮುಗ್ಧ ರೈತರಿಗೆ ತೂಕ ಮತ್ತು ದರದಲ್ಲಿ ಮೋಸವಾಗುವ ಸಾಧ್ಯತೆಯಿದೆ. ಅದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳು ತೂಕದ ಯಂತ್ರದ ಪರವಾನಗಿ ಬಗ್ಗೆ ನಿಗಾವಹಿಸಬೇಕು ಎಂದು ಆಗ್ರಹಿಸಿದರು.

ಮನವಿ ಸ್ವೀಕರಿಸಿದ ತಹಸೀಲ್ದಾರ ಮಂಜುನಾಥ ಅಮಾಸಿ, ಈ ಕುರಿತಂತೆ ಪರಿಶೀಲಿಸಿ ಕ್ರಮ ಕೈಗೊಳ್ಳುವದಾಗಿ ಭರವಸೆ ನೀಡಿದರು. ರೈತರಾದ ಶಿವಾನಂದ ಲಿಂಗಶೆಟ್ಟಿ, ಆನಂದ ಅಮರಶೆಟ್ಟಿ, ಶಿವಪುತ್ರಪ್ಪ ತಾರಿಕೊಪ್ಪ, ಮಹಾಲಿಂಗಗೌಡ ಪಾಟೀಲ, ಶಿವಾನಂದ ಅಕ್ಕೂರ, ಶೇಖರಗೌಡ ಪದ್ಮನಗೌಡ್ರ, ಶಿವಪ್ಪ ಗಡಿಯಣ್ಣವರ, ಶಿವಪ್ರಕಾಶ ಕೊಂಚಿಗೇರಿಮಠ, ಪ್ರಕಾಶ ಗೊರವರ ಸೇರಿ ಹಲವರಿದ್ದರು.

### ಮುಖ್ಯ ಶಿಕ್ಷಕಿಯ ವರ್ಗಾವಣೆಗೆ ಆಗ್ರಹಿಸಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಪ್ರತಿಭಟನೆ

# ಈ ಶಾಲೆಯಲ್ಲಿ ಮಧ್ಯಾಹ್ನ 3 ಗಂಟೆಗೆ ಊಟ!

**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಶಾಲೆಯ ಮುಖ್ಯ ಶಿಕ್ಷಕಿಯನ್ನು ವರ್ಗಾವಣೆ ಮಾಡುವಂತೆ ಆಗ್ರಹಿಸಿ ತಾಲೂಕಿನ ಲಕ್ಕಲಕಟ್ಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಲಕ್ಕಲಕಟ್ಟಿ ಗ್ರಾ.ಪಂ ಮುಂದೆ ಪ್ರತಿಭಟಿಸಿದ ಘಟನೆ ಮಂಗಳವಾರ ಜರುಗಿತು.



ಶಾಲೆಯಲ್ಲಿ ಬಿಸಿಯೂಟ ಹಾಗೂ ಪೌಷ್ಠಿಕ ಆಹಾರವನ್ನು ಸಮರ್ಪಕವಾಗಿ ನೀಡುತ್ತಿಲ್ಲ. ಪರಿಣಾಮ ಊಟದಲ್ಲಿ ಅಲ್ಪ ಪ್ರಮಾಣದ ಕಾಯಿಪಲ್ಲೆ ಬಳಸಲಾಗುತ್ತಿದೆ. ಅಕ್ಟೋಬರ್ ತಿಂಗಳಲ್ಲಿ ಶಾಲೆ ಆರಂಭವಾದ ದಿನದಿಂದ ಎಲ್ಲ ಸರ್ಕಾರಿ ಶಾಲೆಗಳಲ್ಲಿ ನೀಡುವಂತೆ ಮೊಟ್ಟೆ, ಶೇಂಗಾ ಚಿಕ್ಕಿ, ಬಾಳೆಹಣ್ಣು ನೀಡಿಲ್ಲ. ಶಾಲೆಯಲ್ಲಿರುವ ಶೌಚಾಲಯವನ್ನು ಸಹ ಸ್ವಚ್ಛಗೊಳಿಸುವುದೂ ಇಲ್ಲ ಎಂದು ವಿದ್ಯಾರ್ಥಿಗಳು ದೂರಿನ ಸುರಿಮಳೆಯನ್ನೇ ಸುರಿಸಿದರು.

ಇಂತಹ ಪರಿಸ್ಥಿತಿ ಪದೇ ಪದೇ ಶಾಲೆಯಲ್ಲಿ ನಡೆಯುವುದು ಸಾಮಾನ್ಯವಾಗಿದೆ. ಈ ಕುರಿತು ಅಕ್ಷರ ದಾಸೋಹ ಅಧಿಕಾರಿಗಳ ಗಮನಕ್ಕೆ ತಂದರೂ ಸಹ ಯಾವುದೇ ಪರಿಹಾರ ಸಿಕ್ಕಿಲ್ಲ ಎಂದು ಪಾಲಕರಾದ ಶರಣಪ್ಪ ಹೊಸಳ್ಳಿ, ಸೋಮಪ್ಪ ಬೆನಕನವಾರಿ, ಬಸವರಾಜ ಕೊಪ್ಪದ, ಅಳೆಬಸಪ್ಪ ಬೆನಕನವಾರಿ, ಮಲ್ಲಪ್ಪ ಕೊಪ್ಪದ ಹೊನಕೇರಪ್ಪ ಕೊಪ್ಪದ ಆರೋಪಿಸಿದರು.

ಪ್ರತಿಭಟನೆ ವಿಷಯ ತಿಳಿದು ಮದ್ಯಾಹ್ನ 3 ಗಂಟೆಯ ನಂತರ ಬಂದ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎನ್. ಹುರಳಿ ಮಕ್ಕಳ ಹಾಗೂ ಪಾಲಕರ ಜೊತೆ ಸಭೆ ನಡೆಸಿ ಮಾಹಿತಿ ಪಡೆದರು. ಮಕ್ಕಳ ಹಾಗೂ ಪಾಲಕರ ಹೇಳಿಕೆಯನ್ನು ಪಡೆದು, ಈ ವಿಷಯವನ್ನು ಮೇಲಾಧಿಕಾರಿಗಳ ಗಮನಕ್ಕೆ ತರುತ್ತೇನೆ ಎಂದು ಹೇಳಿಕೆ ನೀಡಿದರು. ಪದೇ ಪದೇ ಈ ಸಮಸ್ಯೆ ಎದುರಾಗುತ್ತಿದೆ. ಮುಖ್ಯ ಶಿಕ್ಷಕಿ ಎ.ಎಸ್. ರಾಠೋಡ ವರ್ಗಾವಣೆ ಮಾಡಿದ ಮೇಲೆಯೇ ನಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತೇವೆ ಎಂದು ಪಾಲಕರು ಪಟ್ಟು ಹಿಡಿದರು. ಬಿಇಒ ಹುರಳಿ ಅವರು ಶೀಘ್ರದಲ್ಲಿಯೇ ಸಮಸ್ಯೆಗೆ ಪರಿಹಾರ ಹುಡುಕುತ್ತೇವೆ ಎಂದ ಬಳಿಕ ಪ್ರತಿಭಟನೆ ಮೊಟಕುಗೊಳಿಸಲಾಯಿತು.

ಈ ವೇಳೆ ಗ್ರಾ.ಪಂ ಅಧ್ಯಕ್ಷ ಮಂಜುನಾಥ ಬೆನಕನವಾರಿ, ಅಕ್ಷರ ದಾಸೋಹ ಅಧಿಕಾರಿ ಬಸವರಾಜ ಅಂಗಡಿ, ಶರಣಯ್ಯ ಹಿರೇಮಠ ಸೇರಿದಂತೆ ಗ್ರಾ.ಪಂ ಸದಸ್ಯರು, ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು ಹಾಗೂ ಗ್ರಾಮಸ್ಥರು ಇದ್ದರು.

> ಶಾಲೆಗೆ ಮುಖ್ಯ ಶಿಕ್ಷಕಿ ಬಂದಾಗಿನಿಂದ ಈ ಸಮಸ್ಯೆ ಉದ್ಭವವಾಗಿದೆ ಎಂದು ಆರೋಪಿಸಿ, ಮುಖ್ಯ ಶಿಕ್ಷಕಿಯನ್ನು ವರ್ಗಾಯಿಸಿ ಎಂದು ವಿದ್ಯಾರ್ಥಿಗಳು ಆಗ್ರಹಿಸಿದರು. ಶಾಲೆಯಲ್ಲಿ ಒಟ್ಟು 442 ವಿದ್ಯಾರ್ಥಿಗಳಿದ್ದು ಸಮಯಕ್ಕೆ ಸರಿಯಾಗಿ ಊಟ ನೀಡುವುದಿಲ್ಲ, ಕೆಲವೊಮ್ಮೆ ಮದ್ಯಾಹ್ನ 3 ಗಂಟೆಗೆ ಬಿಸಿಯೂಟ ನೀಡುತ್ತಾರೆ. ಬಿಸಿಯೂಟದಲ್ಲಿ ತರಕಾರಿಗಳನ್ನು ಬಳಸುವುದಿಲ್ಲ, ಇತ್ತ ಖಾರದ ಪುಡಿ ಹಾಕಿಕೊಂಡು ಮಕ್ಕಳು ಊಟ ಮಾಡಿದ ಘಟನೆಗಳೂ ನಡೆದಿವೆ ಎಂದು ವಿದ್ಯಾರ್ಥಿಗಳು ಹಾಗೂ ಪಾಲಕರು ಆರೋಪಿಸಿದರು.

# ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳ ಕುರಿತು ರಾಜ್ಯ ಬಿಜೆಪಿ ವ್ಯಂಗ್ಯ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಕಾಂಗ್ರೆಸ್‌ನ 'ಶಕ್ತಿ' ಯೋಜನೆಗೆ ಆರು ತಿಂಗಳೊಳಗೆ ನಿಶ್ಶಕ್ತಿ ಆವರಿಸಿದೆ. ಒಂದು ವರ್ಷಕ್ಕೆ ಮೀಸಲಿಟ್ಟ ಶಕ್ತಿ ಯೋಜನೆ ಹಣ ಆರೇ ತಿಂಗಳಿಗೆ ಖಾಲಿಯಾಗಿದೆ. ಅಂದರೆ ಕಾಂಗ್ರೆಸ್ ಎಂತಹ ತಿಮಿಂಗಿಲ ಎಂಬುದನ್ನು ನೀವೇ ಊಹಿಸಿ ಎಂದು ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳ ಕುರಿತು ರಾಜ್ಯ ಬಿಜೆಪಿ ವ್ಯಂಗ್ಯವಾಡಿದೆ.



ಈ ಕುರಿತು ಸರಣಿ ಟ್ವೀಟ್ ಮಾಡಿರುವ ಕರ್ನಾಟಕ ಬಿಜೆಪಿ, ಉಚಿತ 10 ಕೆಜಿ ಅಕ್ಕಿಯ ಅನ್ನಭಾಗ್ಯ ಇದುವರೆಗೂ ಕರ್ನಾಟಕದಲ್ಲಿ ಜಾರಿಯಾಗಿಲ್ಲ. ಕೇಂದ್ರ ಸರ್ಕಾರ ಬಡವರಿಗೆ ನೀಡುವ 5 ಕೆಜಿ ಅಕ್ಕಿಯಲ್ಲಿಯೂ 2 ಕೆಜಿ ಅಕ್ಕಿಯನ್ನು ಕರ್ನಾಟಕದ ಕಾಂಗ್ರೆಸ್ ಸರ್ಕಾರ ಗುಳುಂ ಮಾಡಿದೆ ಎಂದು ಬಿಜೆಪಿ ಆರೋಪಿಸಿದೆ.

ರಾಜ್ಯದಲ್ಲಿ ದುರಾಡಳಿತ ನೀಡುತ್ತಿರುವ ಕಾಂಗ್ರೆಸ್ ಚುನಾವಣೆಗೂ ಮುನ್ನ ಉಚಿತ, ಖಚಿತ, ನಿಶ್ಚಿತ ಎಂದೆಲ್ಲಾ ಕರ್ನಾಟಕದ ಜನತೆಯ ಕಿವಿ ಮೇಲೆ ಇಟ್ಟಿದ್ದ ಹೂವುಗಳೆಲ್ಲವೂ ಬೋಗಸ್. ಅಧಿಕಾರಕ್ಕೇರಿ ಆರು ತಿಂಗಳು ಮುಗಿಯುತ್ತಾ ಬಂದರೂ ಘೋಷಿಸಿದ ಗ್ಯಾರಂಟಿಗಳಲ್ಲಿ ನುಡಿದಂತೆ ನಡೆಯದಿರುವುದೇ ಕಾಂಗ್ರೆಸ್ ಮತ್ತು ಸಿಎಂ ಸಿದ್ದರಾಮಯ್ಯ ಅವರ ಸಾಧನೆ ಎಂದು ವ್ಯಂಗ್ಯವಾಡಿದೆ.

# ಮಾಜಿ ಸಚಿವ ಡಿ.ಬಿ. ಚಂದ್ರೇಗೌಡರ ಅಗಲಿಕೆಗೆ ರಂಭಾಪುರಿ ಶ್ರೀಗಳ ಸಂತಾಪ

**■ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು**



ಸರಳ ಸಜ್ಜನಿಕೆಯ ವ್ಯಕ್ತಿತ್ವದ, ಹಿರಿಯ ರಾಜಕಾರಣಿ ಡಿ.ಬಿ. ಚಂದ್ರೇಗೌಡರ ಅಗಲಿಕೆಗೆ ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ತಮ್ಮ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಶಾಸಕರಾಗಿ, ವಿಧಾನ ಪರಿಷತ್ ಸದಸ್ಯರಾಗಿ, ಸಂಸದರಾಗಿ, ರಾಜ್ಯಸಭಾ ಸದಸ್ಯರಾಗಿ, ಸಚಿವರಾಗಿ ಸೇವೆ ಸಲ್ಲಿಸಿದ ಡಿ.ಬಿ. ಚಂದ್ರೇಗೌಡರು ಸದಾ ಸಮಾಜದ ಹಿತ ಚಿಂತನೆ ಮಾಡುವವರಾಗಿದ್ದರು. ಶ್ರೀ ಜಗದ್ಗುರು ರಂಭಾಪುರಿ ಮಹಾಪೀಠದೊಂದಿಗೆ ಅತ್ಯಂತ ಆತ್ಮೀಯ ಸಂಬಂಧ ಹೊಂದಿದ ಅವರು ಶ್ರೀ ಪೀಠದ ಮೂವರು ಜಗದ್ಗುರುಗಳವರೊಡನೆ ನಿಕಟ ಸಂಪರ್ಕ ಹೊಂದಿದವರಾಗಿದ್ದರು. ಪ್ರಸ್ತುತ ಜಗದ್ಗುರುಗಳ ಹಲವಾರು ಸಮಾರಂಭಗಳಲ್ಲಿ ಪಾಲ್ಗೊಂಡಿದ್ದ ಅವರ ಅಗಲಿಕೆ ತಮ್ಮ ಮನಸ್ಸಿಗೆ ನೋವನ್ನುಂಟು ಮಾಡಿದೆ. ಅವರ ಅಗಲಿದ ಪವಿತ್ರ ಆತ್ಮಕ್ಕೆ ದಯಾಘನನಾದ ಪರಮಾತ್ಮನು ಚಿರಶಾಂತಿಯನ್ನು ಅನುಗ್ರಹಿಸಲಿ ಹಾಗೂ ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿ ನೀಡಲಿ ಎಂದು ಶ್ರೀ ರಂಭಾಪುರಿ ಜಗದ್ಗುರುಗಳು ತಮ್ಮ ಸಂತಾಪ ಸೂಚಕ ಸಂದೇಶದಲ್ಲಿ ತಿಳಿಸಿದ್ದಾರೆ.

### ತಾಲೂಕಾ ಕಸಾಪ, ಕದಳಿ ಮಹಿಳಾ ವೇದಿಕೆಯ ಕಾರ್ಯಕ್ರಮದಲ್ಲಿ ಮಳೆಮಲ್ಲಿಕಾರ್ಜುನ ಶಿವಾಚಾರ್ಯರು

# ಶರಣರ ತತ್ವ-ಸಂದೇಶಗಳು ಸಮಾಜದ ಬೆಳಕು

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**


ಬಸವಾದಿ ಶರಣರು ಸಮಾಜದ ಪ್ರಗತಿ, ಬದಲಾವಣೆಗೆ ನೀಡಿದ ಸಂದೇಶಗಳು ಸಾರ್ವಕಾಲಿಕ ಮತ್ತು ವಿಶ್ವಮಾನ್ಯವಾಗಿವೆ ಎಂದು ಲಕ್ಷ್ಮೇಶ್ವರ ಕರೇವಾಡಿಮಠದ ಮಳೆಮಲ್ಲಿಕಾರ್ಜುನ ಶಿವಾಚಾರ್ಯರು ಹೇಳಿದರು.



ಅವರು ಪಟ್ಟಣದ ಚಿದಂಬರೇಶ್ವರ ದೇವಸ್ಥಾನದಲ್ಲಿ ತಾಲೂಕಾ ಕನ್ನಡ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆಯಿಂದ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸೊನ್ನಲಗಿ ಸಿದ್ದರಾಮೇಶ್ವರರ ಕುರಿತು ಉಪನ್ಯಾಸ ನೀಡಿದ ಶಿಕ್ಷಕ, ಸಾಹಿತಿ ಜೆ.ಆರ್. ರಾಮಶೆಟ್ಟರ, ಸೊನ್ನಲಗಿ ಸಿದ್ದರಾಮೇಶ್ವರರ ನಡೆ-ನುಡಿ, ವಚನಗಳು ಹೊಸ ಮನ್ವಂತರಕ್ಕೆ ನಾಂದಿ ಹಾಡಿತು. ಮಹಾರಾಷ್ಟ್ರದ ಸೊನ್ನಲಿಗೆ ಎಂಬ ಗ್ರಾಮದಲ್ಲಿ ಜನ್ಮ ತಾಳಿದ ಸಿದ್ದರಾಮೇಶ್ವರರ ಸಾಮಾಜಿಕ ಬದುಕು ಹಾಗೂ ಚಿಂತನೆ ಅನುಕರಣೀಯ. ಅವರ ಸುಮಾರು 68 ಸಾವಿರಕ್ಕೂ ಅಧಿಕ ವಚನಗಳು ಕಾಯಕ ಮಹತ್ವ ಮತ್ತು ಸಮಾಜದ ಅಂಕುಡೊಂಕು ತಿದ್ದುವಂತಿವೆ. ಮಾತು ಬಾರದ ಮಗುವಾಗಿದ್ದ ಸಿದ್ದರಾಮರು ನಾಡಿಗೆ ಬೆಳಕು ಚೆಲ್ಲುವ ಶಿವಶರಣರಾಗಿ ಬಾಳಿ ಬೆಳಗಿದರು. ಅನುಭವ ಮಂಟಪದ ಮೂಲಕ ಶರಣತತ್ವಕ್ಕೆ ಮಾರುಹೋದ ಸಿದ್ದರಾಮರು ಚನ್ನಬಸವಣ್ಣನವರನ್ನೇ ತಮ್ಮ ಗುರುವಾಗಿ ಸ್ವೀಕರಿಸಿದರು. ವಚನ ಸಾಹಿತ್ಯಕ್ಕೆ ಇವರು ತಮ್ಮದೇ ಆದ ಕೊಡುಗೆ ನೀಡಿ ಚಿರಸ್ಥಾಯಿಯಾಗಿದ್ದಾರೆ ಎಂದರು. ಪುರಸಭೆ ಸದಸ್ಯೆ ಜಯಕ್ಕ ಕಳ್ಳಿ ಉದ್ಘಾಟಿಸಿದರು. ಶರಣ ಸಾಹಿತ್ಯ ಪರಿಷತ್ ತಾಲೂಕಾಧ್ಯಕ್ಷ ಎಲ್.ಎಸ್. ಅರಳಹಳ್ಳಿ, ಕದಳಿ ವೇದಿಕೆ ಅಧ್ಯಕ್ಷೆ ನಿರ್ಮಲಾ ಅರಳಿ, ಶಿಕ್ಷಕ ವೈ.ಎಚ್. ಮಾಚೇನಹಳ್ಳಿ, ದ್ಯಾಮನಗೌಡ ಪಾಟೀಲ, ಶಂಕರಣ್ಣ ಗೊರವರ, ಮಂಜುನಾಥ ಬೂದಿಹಾಳ, ವೆಂಕಣ್ಣ ಚೌರಡ್ಡಿ, ಮಹಾದೇವಗೌಡ ಪಾಟೀಲ ಉಪಸ್ಥಿತರಿದ್ದರು. ಸಿ.ಜಿ. ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಪಿ.ಬಿ. ಖರಾಟೆ, ಎನ್.ಆರ್. ಸಾತಪೂತೆ, ಶಂಕ್ರಣ್ಣ ಶೀಳ್ಳಿನ ಸೇರಿದಂತೆ ಅನೇಕರು ಹಾಜರಿದ್ದರು. ಅಶೋಕ ಸೊರಟೂರ ಸ್ವಾಗತಿಸಿದರು. ನಾಗರಾಜ ಹಣಗಿ ನಿರೂಪಿಸಿದರು. ಸೋಮು ಯತ್ನಳ್ಳಿ ವಂದಿಸಿದರು. ಯುವ ಕಲಾವಿದೆ ಪ್ರಿಯಾಂಕ ಹಾವೇರಿ ಮತ್ತು ಸಹೋದರ ಪ್ರಸನ್ ಹಾವೇರಿ ಸೊನ್ನಲ್ಲಗಿ ಸಿದ್ದರಾಮೇಶ್ವರ ವಚನಗಳ ಗೀತಗಾಯನ ಪ್ರಸ್ತುತಪಡಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

> ಶರಣರು, ಸಂತರು, ದಾಸವರೇಣ್ಯರು ತಮ್ಮದೇ ಆದ ಜನಮಾನಸದ ಸಾಹಿತ್ಯದ ಮೂಲಕ ಸಮಾಜದ ಸುಧಾರಣೆಗಾಗಿ ಮಾಡಿದ ಸೇವೆ ಸ್ಮರಣೀಯ. ಅವರ ಬದುಕೇ ಜೀವನ್ಮಾರ್ಗವಾಗಿದೆ. ಅವರು ಸಮಾಜಕ್ಕೆ ತಿಳಿಸಿದ ತತ್ವ-ಸಂದೇಶಗಳು ಸಮಾಜಕ್ಕೆ ಬೆಳಕಾಗಿವೆ.
> – ಮಳೆಮಲ್ಲಿಕಾರ್ಜುನ ಶಿವಾಚಾರ್ಯರು.

# ಸಂಧಾನಕಾರನಿಂದಲೇ ಬಲಾತ್ಕಾರ: ದೂರು ದಾಖಲು



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಗಂಡ-ಹೆಂಡತಿ ಜಗಳ ಸಂಧಾನ ಮಾಡುವ ಸಂಧಾನಕಾರನೇ ಮಹಿಳೆಯ ಮೇಲೆ ಬಲಾತ್ಕಾರ ಮಾಡಿದ ಘಟನೆ ತಡವಾಗಿ ಬೆಳಕಿಗೆ ಬಂದಿದ್ದು, ಈ ಕುರಿತು ನೊಂದ ಮಹಿಳೆ ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾಳೆ.

ಶಿಗ್ಲಿ ಗ್ರಾಮದ 25 ವರ್ಷದ ಮಹಿಳೆಯೊಬ್ಬಳು ಅ.31ರಂದು ತನ್ನ ಗಂಡನ ಕಿರಿಕಿರಿಯಿಂದ ಬೇಸತ್ತು ಪೊಲೀಸ್ ಠಾಣೆಗೆ ದೂರು ಕೊಡಲು ಬಂದಿದ್ದಳು. ಈ ವೇಳೆ ಶಿಗ್ಲಿ ಗ್ರಾಮದ ವ್ಯಕ್ತಿಯೊಬ್ಬ ಮಧ್ಯಸ್ಥಿಕೆ ವಹಿಸಲು ಮುಂದಾಗಿದ್ದು, ಈ ಸಂಬಂಧ ದೂರು ಕೊಡುವುದು ಬೇಡ, ನಿನ್ನ ಗಂಡನಿಗೆ ನಾನೇ ಬುದ್ಧಿ ಹೇಳುತ್ತೇನೆ, ಸ್ವಲ್ಪ ದಿನದ ಮಟ್ಟಿಗೆ ನಿನ್ನ ತವರು ಮನೆಗೆ ಕಳುಹಿಸಿ ಬರುತ್ತೇನೆ ಎಂದು ಪುಸಲಾಯಿಸಿ ಶಿಗ್ಲಿ ಗ್ರಾಮದ ಹೊರವಲಯದ ಲಾಡ್ಜ್ ಒಂದಕ್ಕೆ ಕರೆದುಕೊಂಡು ಹೋಗಿದ್ದಾನೆ. ಅಲ್ಲಿನ ರೂಮ್‌ನಲ್ಲಿರಿಸಿ ಆಹಾರದಲ್ಲಿ ಮಂಪರು ಬರುವ ಔಷಧ ತಿನ್ನಿಸಿ ಬಳಿಕ ಬಲಾತ್ಕಾರ ಮಾಡಿದ್ದಾನೆ. ಬೆಳಿಗ್ಗೆ ಸಮೀಪದ ಯಲವಗಿ ರೇಲ್ವೆ ನಿಲ್ದಾಣಕ್ಕೆ ಕರೆದುಕೊಂಡು ಹೋಗಿ ನಿನ್ನ ತವರು ಮನೆಗೆ ಹೋಗುವಂತೆ ಮತ್ತು ಈ ವಿಷಯ ಯಾರಿಗಾದರೂ ಹೇಳಿದರೆ ಕೊಂದು ಹಾಕುತ್ತೇನೆ ಎಂದು ಹೆದರಿಸಿದ್ದಾನೆ. ಮಹಿಳೆ ತನ್ನ ಹಿತೈಷಿಗಳೊಂದಿಗೆ ಚರ್ಚಿಸಿ ನ.7ರಂದು ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ಮಧ್ಯಸ್ಥಿಕೆ ವಹಿಸಲು ಬಂದಿದ್ದ ವ್ಯಕ್ತಿಯ ವಿರುದ್ಧ ದೂರು ನೀಡಿದ್ದಾಳೆ. ದೂರು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

# ತಮಿಳುನಾಡಿನಲ್ಲಿ ಸಂಘ ಧ್ವಜ ಮೆರವಣಿಗೆಗೆ ಸುಪ್ರೀಂ ಒಪ್ಪಿಗೆ

**■ವಿಜಯಸಾಕ್ಷಿ ಸುದ್ದಿ, ನವದೆಹಲಿ**

ತಮಿಳುನಾಡಿನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಧ್ವಜ ಮೆರವಣಿಗೆಗೆ ಅನುಮತಿ ನೀಡಬೇಕೇ ಅಥವಾ ನವೆಂಬರ್ 26ರಂದು ರ್‍ಯಾಲಿಯ ಮಾರ್ಗಕ್ಕೆ ಒಳಪಟ್ಟು ಅನುಮತಿ ನೀಡಬೇಕೇ ಎಂದು ನಿರ್ಧರಿಸುವ ಆಯ್ಕೆಯನ್ನು ರಾಜ್ಯಕ್ಕೆ ಬಿಟ್ಟಿರುವ ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ.

ರಾಜ್ಯದ ವಿವಿಧ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಧ್ವಜ ಮೆರವಣಿಗೆಗೆ ಅನುಮತಿ ನೀಡಿದ ಮದ್ರಾಸ್ ಹೈಕೋರ್ಟ್ ಆದೇಶದ ವಿರುದ್ಧ ರಾಜ್ಯದ ಮನವಿಯನ್ನು ಆಲಿಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ದೀಪಂಕರ್ ದತ್ ಅವರನ್ನೊಳಗೊಂಡ ನ್ಯಾಯಪೀಠ, ಮೆರವಣಿಗೆಯ ಸಂಘಟಕರು ನವೆಂಬರ್ 9ರೊಳಗೆ ತಮ್ಮ ಉದ್ದೇಶಿತ ಮಾರ್ಗವನ್ನು ಸಲ್ಲಿಸಬಹುದು ಮತ್ತು ನವೆಂಬರ್ 15ರೊಳಗೆ ರಾಜ್ಯವು ಮಾರ್ಗವನ್ನು ಸೂಚಿಸಬೇಕು ಎಂದು ಹೇಳಿದರು.

ಬಲಪಂಥೀಯ ಸಂಘಟನೆಯ ವಕೀಲರು ಮೆರವಣಿಗೆಯ ದಿನಾಂಕ ಮತ್ತು ಮಾರ್ಗವನ್ನು ನಿಗದಿಪಡಿಸುವ ಬಗ್ಗೆ ರಾಜ್ಯ ಅಧಿಕಾರಿಗಳೊಂದಿಗೆ ಸಹಕರಿಸುವುದಾಗಿ ಹೇಳಿದರು. 'ನಾವು ಮೆರವಣಿಗೆಯನ್ನು ನಡೆಸಲು ಬಯಸುತ್ತೇವೆ' ಎಂದು ಪ್ರತಿವಾದಿಯನ್ನು ಪ್ರತಿನಿಧಿಸಿದ ಹಿರಿಯ ಅಡ್ವೊಕೇಟ್ ಮಾಧವಿ ದಿವಾನ್ ಹೇಳಿದರು.

ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದ್ದಕ್ಕಾಗಿ ಮತ್ತು ರಾಜ್ಯಾದ್ಯಂತ ಮಾರ್ಗ ಮೆರವಣಿಗೆಗಳನ್ನು ನಡೆಸಲು ಸಂಘಟನೆಗೆ ಅನುಮತಿ ನಿರಾಕರಿಸಿದ್ದಕ್ಕಾಗಿ ಆರ್‌ಎಸ್‌ಎಸ್ ಸಲ್ಲಿಸಿದ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಮದ್ರಾಸ್ ಹೈಕೋರ್ಟ್ ಕಳೆದ ವಾರ ಗೃಹ ಕಾರ್ಯದರ್ಶಿ, ಡಿಜಿಪಿ ಮತ್ತು ಇತರ ಅಧಿಕಾರಿಗಳಿಗೆ ಸಮನ್ಸ್ ನೀಡಿತ್ತು.



### ಶಿರಹಟ್ಟಿ ಬ್ಲಾಕ್ ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ನಡೆದ ವಿಜ್ಞಾನ ವಸ್ತುಪ್ರದರ್ಶನ

# ವಿದ್ಯಾರ್ಥಿಗಳಲ್ಲಿನ ವಿಜ್ಞಾನಿಗೆ ಪ್ರೋತ್ಸಾಹ



> **ಫಲಿತಾಂಶ**
>
> **ವೈಯಕ್ತಿಕ ವಿಭಾಗ:** ಪ್ರಥಮ-ಜ್ಯೋತಿ ಉಪ್ಪಾರ-ಕೆಪಿಎಸ್ ಕಡಕೋಳ, ದ್ವಿತೀಯ-ರೇಷ್ಮಾ ಬಾಕಳೆ-ಪಿಎಸ್‌ಬಿಡಿ ಪ್ರೌಢಶಾಲೆ ಲಕ್ಷ್ಮೇಶ್ವರ, ತೃತೀಯ-ಸಚಿನ ಲಮಾಣಿ-ಎಂಡಿಆರ್‌ಎಸ್ ಒಡೆಯರ ಮಲ್ಲಾಪುರ.
>
> **ಸಾಮೂಹಿಕ ವಿಭಾಗ:** ಪ್ರಥಮ-ಸರ್ಕಾರಿ ಪ್ರೌಢಶಾಲೆ-ರಾಮಗಿರಿ, ದ್ವಿತೀಯ-ಸರ್ಕಾರಿ ಪ್ರೌಢಶಾಲೆ ಮಾಡಳ್ಳಿ, ತೃತೀಯ-ಸರ್ಕಾರಿ ಪ್ರೌಢಶಾಲೆ ಗೊಜನೂರ ವಿದ್ಯಾರ್ಥಿಗಳು ಬಹುಮಾನ ಪಡೆದುಕೊಂಡರು.

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ವಿಜ್ಞಾನ ಕೇವಲ ಪ್ರಯೋಗಾಲಯದಲ್ಲಿರದೇ ನಿತ್ಯ ಬದುಕಿನ ನಡೆಯಲ್ಲಿದೆ. ಸುಜ್ಞಾನದ ಅಡಿಯಲ್ಲಿ ವಿಜ್ಞಾನವನ್ನು ಕಟ್ಟಬೇಕಾಗಿದೆ ಎಂದು ಡಯಟ್ ಉಪನ್ಯಾಸಕ ಜಿ.ಡಿ. ದಾಸರ ಹೇಳಿದರು.

ಸರಕಾರಿ ಪ್ರೌಢಶಾಲೆ ಗೊಜನೂರಿನಲ್ಲಿ ಜರುಗಿದ ಶಿರಹಟ್ಟಿ ಬ್ಲಾಕ್ ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ನಡೆದ ವಿಜ್ಞಾನ ವಸ್ತುಪ್ರದರ್ಶನದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿಜ್ಞಾನ ವಸ್ತು ಪ್ರದರ್ಶನ ಮೂಲಕ ಮಕ್ಕಳಲ್ಲಿ ಹುದುಗಿರುವ ವಿಜ್ಞಾನದ ಜ್ಞಾನವನ್ನು ಜಾಗೃತಗೊಳಿಸಲಾಗುತ್ತಿದೆ ಎಂದರು.

ತಾಲೂಕಾ ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಎಂ.ಬಿ. ಹೊಸಮನಿ ಮಾತನಾಡಿ, ತಾಲೂಕಿನಲ್ಲಿ ವಿವಿಧ ಶಾಲೆಗಳಲ್ಲಿ ವಿಜ್ಞಾನ ನಾಟಕ ಸ್ಪರ್ಧೆ, ವಿಜ್ಞಾನ ವಿಚಾರ ಸಂಕಿರಣ ಮುಂತಾದ ವಿಜ್ಞಾನದ ಚಟುವಟಿಕೆಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ತಾಲೂಕಾ ನೋಡಲ್ ಬಿಆರ್‌ಪಿ ಈಶ್ವರ ಮೆಡ್ಲೇರಿ ಮಾತನಾಡಿ, ವಿಜ್ಞಾನ ವಸ್ತು ಪ್ರದರ್ಶನದ ಮೂಲಕ ವಿದ್ಯಾರ್ಥಿಗಳಲ್ಲಿನ ವಿಜ್ಞಾನಿಯನ್ನು ಗುರುತಿಸಿ ಅವರಿಗೆ ಉತ್ತಮ ವೇದಿಕೆ ಕಲ್ಪಿಸುವುದೇ ಇದರ ಪ್ರಮುಖ ಉದ್ದೇಶವಾಗಿದೆ ಎಂದರು.

ಗ್ರಾ.ಪಂ ಅಧ್ಯಕ್ಷೆ ನೀಲಮ್ಮ ಮಾದರ ಕಾರ್ಯಕ್ರಮ ಉದ್ಘಾಟಿಸಿದರು. ಸದಸ್ಯೆ ನೀಲಮ್ಮ ಪಾಟೀಲ, ಚಂದ್ರಗೌಡ ಪಾಟೀಲ, ಶಿಕ್ಷಣ ಸಂಯೋಜಕ ಎಸ್.ಹರೀಶ್, ಶಿಕ್ಷಕ ಎಂ.ಡಿ. ತಳ್ಳಳ್ಳಿ, ಸಿಆರ್‌ಪಿ ಉಮೇಶ ನೇಕಾರ ಮುಂತಾದವರಿದ್ದರು. ಮುಖ್ಯೋಪಾಧ್ಯಾಯೆ ಗೀತಾ ಪೂಜಾರ ಸ್ವಾಗತಿಸಿದರು.

ಅಗಡಿ ಇಂಜಿನಿಯರಿಂಗ್ ಕಾಲೇಜ್ ಉಪನ್ಯಾಸಕ ಡಾ. ಎನ್.ಹಯವದನ, ಉಪನ್ಯಾಸಕ ವಿನಾಯಕ ವೇತಾಳ, ಸಂಪನ್ಮೂಲ ವ್ಯಕ್ತಿ ಶೇಖರ ಚಿಕ್ಕಣ್ಣವರ ವಿಜ್ಞಾನ ವಸ್ತು ಪ್ರದರ್ಶನದ ನಿರ್ಣಾಯಕರಾಗಿದ್ದರು.

ಇಸಿಓ ಉಮೇಶ ಹುಚ್ಚಯ್ಯನಮಠ, ಶಿಕ್ಷಕ ಎಚ್.ಬಿ. ಮೇಟಿ, ಚಂದ್ರಶೇಖರ ಜೋಗಿನ ನಿರೂಪಿಸಿದರು. ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ತಾಲೂಕಿನ 34 ಪ್ರೌಢಶಾಲೆಗಳು ಭಾಗವಹಿಸಿದ್ದವು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka